Reg. No. : KARKAN/2013/52928
Post No. : KA/SK/MND/978/2020-20222

# ಶ್ರೀ ವೈಕುಂಠ ವಾರ್ತಾ

## ಆಧ್ಯಾತ್ಮಿಕ–ಶೈಕ್ಷಣಿಕ ಮಾಸ ಪತ್ರಿಕೆ

ಸಂಪುಟ : 20 ಸಂಚಿಕೆ : 7 ಮಂಡ್ಯ ಏಪ್ರಿಲ್–2021 ರೂ. : 2.00 ಪುಟಗಳು : 20

## ಗಂಗೆಯ ಸುತನಿಗೆ ಅಂತಿಮ ನಮನ.......



# ಪೂಜ್ಯ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿ ರವರ

## ಪಾದಚರಣಕ್ಕೆ ಭಕ್ತಿ ಪೂರ್ವಕ ನಮನಗಳು











## ಪೂಜ್ಯ ಶ್ರೀ ಶ್ರೀ ಅನಂತಕುಮಾರ್ ಸ್ವಾಮೀಜಿರವರು

ಸ್ವಾಮೀಜಿರವರನ್ನು ಸದಾಕಾಡುತ್ತಿದ್ದ ಪ್ರಶ್ನೆಯೆಂದರೆ ನನ್ನ ಬದುಕಿನ ಬಹುತೇಕ ಎಲ್ಲಾ ಕ್ಷಣಗಳನ್ನು ಮಂಡ್ಯದಲ್ಲಿ ಕಳೆಯಲು ನಾನೇಕೆ ಮಂಡ್ಯ ಕ್ಷೇತ್ರವನ್ನು ಆಯ್ಕೆಮಾಡಿಕೊಂಡೆ ಎಂಬ ಜಿಜ್ಞಾಸೆ ಕಾಡುತ್ತಿತ್ತು. ಇಂಥಹ ಪ್ರಶ್ನೆಯನ್ನು ನಾವು ಅವರನ್ನೇ ಕೇಳಿದಾಗ ಅವರು ಮುಗುಳ್ನಗೆಯಿಂದ ನೀಡುತ್ತಿದ್ದ ಉತ್ತರ ಹಣೆಯ ಮೇಲೆ ಬೆರಳಿಟ್ಟು ಎಲ್ಲವೂ ಹಣೆಬರಹ ಎನ್ನುತ್ತಿದ್ದರು. 1979ರಲ್ಲಿ ಮಂಡ್ಯಕ್ಕೆ ಆಗಮಿಸಿದಾಗ ಭಗವಂತನ ಪ್ರೇರಣಾ ಶಕ್ತಿಯೊಂದನ್ನು ಬಿಟ್ಟರೆ ಉಳಿದೆಲ್ಲವೂ ಪುರಂದರದಾಸರ ಸ್ಥಿತಿಗತಿಗಳೇ.

ಸ್ವಾಮೀಜಿಗಳು ಮಂಡ್ಯಕ್ಕೆ ಬಂದಾಗ ಮಂಡ್ಯ ಪ್ರಬುದ್ಧ ಗಂಡು ಮೆಟ್ಟಿದ ನಾಡಾಗಿತ್ತು ಶಿಸ್ತು, ಬದ್ದತೆ, ಸಾಮಾಜಿ ಕಕಳಕಳಿಯುಳ್ಳ ರಾಜಕಾರಣಿಗಳು, ಮಂಡ್ಯದಅಭಿವೃದ್ಧಿಗೆಆಧ್ಯತೆ ನೀಡುವ ಜನ ಸಮುದಾಯವಾಗಿ. ನಾನು ವಿಶೇಷವಾಗಿ ಕಂಡೆ. ಮಂಡ್ಯದ ವಿಶಿಷ್ಠ ಮತ್ತು ವೈಶಿಷ್ಟ್ಯದ ಬಗ್ಗೆ ಹಲವಾರು ಭಾಷಣಗಳಲ್ಲಿ ಸ್ವಾಮೀಜಿ ಹೇಳಿದ ಮಾತುಗಳು ನೆನಪಿನಿಂದ ಮಾಸಿಲ್ಲ.

ಮಂಡ್ಯದ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವ ಆಲೋಚನೆಯೊಂದಿಗೆ ಆ ದಿನ ಆರಂಭಿಸಿದ ಶಾಲೆ ಇಂದು ಬೃಹದಾಕಾರದ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ.

ಈ ಸಾಧನೆ ನಾಲ್ಕು ದಶಕಗಳ ನಿರಂತರ ಪರಿಶ್ರಮ, ತಾಳ್ಮೆ, ಆತ್ಮವಿಶ್ವಾಸ, ಜನರ ಸಹಕಾರ, ಗುರುಹಿರಿಯರ ಆಶೀರ್ವಾದ. ದೇವರ ಕೃಪೆಯಿಂದ ಆಗಿದ್ದೇಯೇ ಹೊರತು ನಾನೊಬ್ಬನೇ ಮಾಡಿದ್ದು ಎಂದು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ.





## ಶ್ರೀ ಶಿವಮೂರ್ತಿ ಕೀಲಾರ

ಬದುಕು ನಾವು ಏಣಿಸಿದಂತೆ ಇರುವುದಿಲ್ಲ ಅಂದುಕೊಂಡದ್ದುಯಾವುದು ಬದುಕಲ್ಲಆದರೂ ಬಂದದ್ದನ್ನು ಬಂದ ಹಾಗೆ ಅನುಭವಿಸುವುದೇ ಜೀವನದ ಸರಳ ಲೆಕ್ಕಚಾರ. ನಾನು ವಿದ್ಯಾರ್ಥಿದೆಸೆ ಯಿಂದಲೂಕೂಡ ಗ್ರಾಮೀಣ ಭಾಗದಜೀವನವನ್ನು ಕಂಡವನು ಗುರಿ, ದಾರಿಯ ಪರಿವೇ ಇಲ್ಲದ ನನ್ನ ಬದುಕಿಗೆ ಹೊಸ ಅರ್ಥ ರೂಪಿಸಿ ಕೊಟ್ಟವರು ಶ್ರೀ ಅನಂತಕುಮಾರ ಸ್ವಾಮೀಜಿರವರು. ನನ್ನ ಜೀವನಕ್ಕೆ ಸ್ಪಷ್ಟ ಪರಿಕಲ್ಪನೆ ಬಂದುದ್ದು ಗುರುಗಳಾದ ಪೂಜ್ಯ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರಿಂದ.

ನನ್ನ ಜೀವನದ ಪ್ರತಿ ಹಂತದ ಬೆಳವಣಿಗೆಯಲ್ಲಿ ಸ್ವಾಮೀಜಿರವರ ಆದರ್ಶ, ಸರಳತೆ ಮತ್ತು ಸಾಮಾಜಿಕ ಕಳಕಳಿಯನ್ನು ಅಳವಡಿಸಿಕೊಳ್ಳುವ ಪ್ರಯತ್ನ ನಡೆಯುತ್ತಲೇ ಇದೆ. ಸ್ವಾಮೀಜಿ ಮತ್ತು ನನ್ನ ನಡುವಿನ ಅವಿನಾಭಾವ ಸಂಬಂಧ. ಅಭಿನವ ಭಾರತಿ ಎಂಬ ಬೃಹದಾಕಾರಕ ಸಂಸ್ಥೆಯನ್ನುಕಟ್ಟಿ ಬೆಳೆಸಿ ಅದರ ನಿರ್ವಹಣೆ ಮತ್ತು ನಿರಂತರವಾಗಿ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯ ಸಿಗುವಂತೆ ಮಾಡುವ ಹೊಣೆಗಾರಿಕೆ ನನ್ನ ಹೆಗಲ ಮೇಲೆ ಹೊರೆಸಿ ಹೋಗಿದ್ದಾರೆ.

ನನಗೆ ಇನ್ನು ನೆನಪಿದೆ ಸ್ವಾಮೀಜಿಗಳು ನನ್ನನ್ನು ಮಾನಸ ಪುತ್ರಎಂದು ಘೋಷಿಸಿದರು, ಅವರ ಹೃದಯದಲ್ಲಿ ಸಿಕ್ಕಿರುವ ಈ ಉನ್ನತ ಸ್ಥಾನ ಗೌರವಕ್ಕೆ ನಾನು ಸದಾಚಿರಋಣಿ. ಇಷ್ಟನ್ನು ಸ್ಮರಿಸುವುದರಜೊತೆಗೆ ಸಂಸ್ಥೆಯ ಎಲ್ಲಾ ಜವಾದ್ದಾರಿಯನ್ನು ನಿರ್ವಹಿಸಿಕೊಂಡು ಸಂಸ್ಥೆಯ ಬೆಳವಣಿಗೆಗೆ ಪೂರಕವಾಗುವಂತೆ ಶಿಕ್ಷಣದ ಹೊಸ ಆವಿಷ್ಕಾರಗಳನ್ನು ರೂಪಿಸುವ ನಿಟ್ಟಿನಲ್ಲಿ ನಾನು ಹೆಜ್ಜೆಇಟ್ಟಿದ್ದೇನೆ.

ಶಿಕ್ಷಣ ಕ್ಷೇತ್ರದಲ್ಲಾಗುವ ಬದಲಾವಣೆ, ಸಮಸ್ಯೆ, ಸವಾಲುಗಳನ್ನು ಎದರಿಸುವ ಜೊತೆಗೆ ಈ ಸಂಸ್ಥೆಯನ್ನು ಸರಿಯಾದ ದಿಕ್ಕು ದಾರಿಗಳಲ್ಲಿ ತೆಗೆದುಕೊಂಡು ಹೋಗುವ ಸಾಮರ್ಥ್ಯ, ಧೈರ್ಯ ಮತ್ತು ಅಚಲವಾದ ಆತ್ಮವಿಶ್ವಾಸವನ್ನು ಸ್ವಾಮೀಜಿರವರು ಸದಾತುಂಬುತ್ತಲೇ ಇದ್ದರೆ ಮಾತ್ರ ನಾವು ಶಕ್ತಿವಂತರಾಗಿ ಹೊರಹೊಮ್ಮಲು ಸಾಧ್ಯ.

ಸ್ವಾಮೀಜಿಯವರು ಹಾಕಿ ಕೊಟ್ಟಿರುವ ಆಧ್ಯಾತ್ಮಿಕ ಮಾರ್ಗದಲ್ಲಿ ನಾವು ಸಾಗುವ ಸಂಕಲ್ಪ ಮಾಡಿದ್ದೇವೆ. ಸ್ವಾಮೀಜಿರವರಷ್ಟು ಧೈರ್ಯ ಮತ್ತು ಸಾಹಸ ಮನೋಭಾವನೆಯಿಂದ ಮಾಡುವುದು ಕಷ್ಟ ಸಾಧ್ಯಆದರೂ ಅವರ ಆಶೀರ್ವಾದದಿಂದ ಎಲ್ಲವನ್ನು ಸಾದಿಸುತ್ತೇವೆ ಎಂಬ ಆತ್ಮ ವಿಶ್ವಾಸ ನಮ್ಮಲ್ಲಿ ಬೇರೂರುತ್ತಿದೆ.

# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ-ಶೈಕ್ಷಣಿಕ ಮಾಸ ಪತ್ರಿಕೆ

ಸಂಪುಟ : 20 ಸಂಚಿಕೆ : 7

ಮಂಡ್ಯ ಏಪ್ರಿಲ್-2021

ಪುಟಗಳು : 20

ಗೌರವ ಸಂಪಾದಕರು :

**ಕೆ. ಎನ್. ರವಿ**

ಪ್ರಕಾಶಕರು ಮತ್ತು ಸಂಪಾದಕರು

**ಶಿವಮೂರ್ತಿ ಕೀಲಾರ**

ಅಧ್ಯಕ್ಷರು : ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್

ಮುದ್ರಕರು : ಶಿವಪ್ರಕಾಶ್

ಐಡಿಯಲ್ ಆಫ್ ಸೆಟ್ ಪ್ರಿಂಟರ್ಸ್,

ಮಂಡ್ಯ.

ವಾರ್ಷಿಕ ಚಂದಾ ವಿವರ : ರೂ. 150/-

ವಿಳಾಸ :

ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್,

5ನೇ ಕ್ರಾಸ್, ಶಂಕರ ನಗರ, ಮಂಡ್ಯ.


## ಪರಿವಿಡಿ


| ಲೇಖನಗಳು | ಪುಟ ಸಂಖ್ಯೆ |
|---|---|
| ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ ಹಾಗೂ ಆಧ್ಯಾತ್ಮಿಕ ಚಿಂತನೆ. | -2 |
| ಶ್ರೀ ವೈಕುಂಠ ವಾರ್ತಾ ಸ್ಥಾಪಕ ಸಂಪಾದಕನಾಗಿ (ನೆನಪಿನಂಗಳದಿಂದ) | -3 |
| ಭಕ್ತ ಮತ್ತು ದೇವರ ಅವಿನಾಭಾವ ಸಂಬಂಧ | -5 |
| ನಿಷ್ಕಾಮ ಯೋಗಿ | -6 |
| ಸಾಧನೆಯ ಮಲ್ಲಗಂಬ ಅಭಿನವ ಭಾರತಿ ವಿದ್ಯಾಕೇಂದ್ರ ಮಂಡ್ಯ | -7 |
| ಅಭಿನವ ಭಾರತಿಯ ಚೈತನ್ಯದ ಚಿಲುಮೆ | -8 |
| ಔಷಧ ಲೋಕದ ಅರಾಕಿರಣ ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮ | -9 |
| ಸಂಸ್ಕೃತಿ, ಸಂಸ್ಕಾರದ ಉಳಿವಿಗೆ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ | -11 |
| ಅಧ್ಯಾತ್ಮಿಕ ವಿಚಾರ ದರ್ಶನ | -12 |
| ಯೋಗ ಮತ್ತು ಆಧ್ಯಾತ್ಮಿಕತೆ | -15 |


# ಸಂಪಾದಕೀಯ

## ಹೊಸ ಸಂಕಲ್ಪದೊಂದಿಗೆ -ವೈಕುಂಠವಾರ್ತೆ

ಸಂಪಾದಕೀಯ : ವೈಕುಂಠವಾರ್ತಾ ಆಧ್ಯಾತ್ಮಿಕ ಮತ್ತು ಧರ್ಮ ಇವುಗಳ ಸುಯೋಗದ ಮಾಸ ಪತ್ರಿಕೆ . ಅನಂತಕುಮಾರ ಸ್ವಾಮೀಜಿಯವರ ಕನಸಿನ ಕೂಸು. ಧರ್ಮೋರಕ್ಷತಿ, ರಕ್ಷಿತಃ ಎಂಬ ಮಾತಿನಂತೆ ಅನಂತಕುಮಾರ ಸ್ವಾಮೀಜಿಯವರು, ಧರ್ಮವನ್ನು ಕಾಪಾಡಿಕೊಂಡೇ ಮಾನವೀಯ ಮೌಲ್ಯದ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿದ್ದಾರೆ. ಮಹಾನ್ ಸಂತ ಕೂಡ ದೂರದೃಷ್ಟಿ ಮತ್ತು ಆಧ್ಯಾತ್ಮದ ಅರಿವು ಮೂಡಿಸುವಲ್ಲಿ ವೈಕುಂಠ ವಾರ್ತಾ ಕಳೆದ 18 ವರ್ಷಗಳಿಂದ ನಿರಂತರವಾಗಿ ಪ್ರಕಟವಾಗುತ್ತಿದೆ. 2020 ಆಘಾತಕಾರಿ ವರ್ಷ.ಒಂದು ವೈಕುಂಠ ವಾರ್ತಾ ಪತ್ರಿಕೆ ಕಳೆದ ಏಪ್ರಿಲ್‌ನಿಂದ ಪ್ರಕಟವಾಗದೆ ಸ್ಥಗಿತವಾಗಿದ್ದು, ಎರಡನೆಯದು ಅನಂತಕುಮಾರ್ ಸ್ವಾಮೀಜಿ ಕಳೆದ ಸೆಪ್ಟಂಬರ್‌ನಲ್ಲಿ ಇಹಲೋಕ ತ್ಯಜಿಸಿದ್ದು ಪತ್ರಿಕೆಯ ಪ್ರಕಟಣೆ ಮೇಲೆ ಗಂಭೀರವಾದ ಪರಿಣಾಮ ಬೀರಿತ್ತು.

ಆಧ್ಯಾತ್ಮಕ್ಕೆ ಸಂಬಂಧಿಸಿದಂತೆ ಒಂದು ಪತ್ರಿಕೆಯ ರೂಪು-ರೇಷೆಯನ್ನು ಸಿದ್ಧಪಡಿಸುವುದು ಸುಲಭದ ಮಾತಲ್ಲ. ಸ್ವಾಮೀಜಿಗಳು ತಮ್ಮ ಶಕ್ತಿ ಸಾಮರ್ಥ್ಯವನ್ನು ಬಳಕೆಮಾಡಿ ಶೈಕ್ಷಣಿಕ, ಆಧ್ಯಾತ್ಮ, ಕ್ರೀಡೆ, ಸಂಸ್ಕೃತಿಯ ಜೊತೆಯಲ್ಲೇ ಒಂದು ಪತ್ರಿಕೆಯನ್ನು ನಿರ್ವಹಣೆಮಾಡಿದ್ದು ಇಂದಿಗೂ ನಮಗೆ ದಾರೀ ದೀಪವಾಗಿದೆ.

ನಾವು ಒಂದು ಸಂಕಲ್ಪ ಮಾಡಿದೆವು. ಸ್ವಾಮೀಜಿಗಳ ಇಟ್ಟ ಹೆಜ್ಜೆ, ತೋರಿದದಾರಿಯಲ್ಲಿ ನಿರಂತರವಾಗಿ ನಡೆದುಕೊಂಡು ಹೋಗುವುದೇ ಸ್ವಾಮೀಜಿಗೆ ಸಲ್ಲಿಸುವ ಗೌರವ. ಈ ಕಾರಣಕ್ಕಾಗಿ ಶ್ರೀ ವೈಕುಂಠವಾರ್ತಾ ಮಾಸ ಪತ್ರಿಕೆಗೆ ಮರು ಚಾಲನೆ ನೀಡಿದ್ದೇವೆ. ಹೊಸ ರೂಪ, ವಿನ್ಯಾಸ, ಹೊಸ ಪರಿಕಲ್ಪನೆಯೊಂದಿಗೆ ಪತ್ರಿಕೆಯನ್ನು ಹೊರತರುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುವ ನಿರ್ಧಾರ ಮಾಡಿದ್ದೇವೆ. ಸ್ವಾಮೀಜಿಗಳ ಭಕ್ತರು, ಅಭಿಮಾನಿಗಳು, ಹಿತೈಷಿಗಳು, ಹಿತಚಿಂತಕರು ಪತ್ರಿಕೆಗೆ ಶಕ್ತಿ ತುಂಬಬೇಕು. ಹೊಸ ಪ್ರಯತ್ನಕ್ಕೆ ದಾರೀ ದೀಪವಾಗಬೇಕು ಎಂದುಕೋರುತ್ತೇವೆ.

ಈ ಸಂದರ್ಭದಲ್ಲಿ ಶ್ರೀಯುತ ಟಿ. ವೆಂಕಟೇಶ್, ವ್ಯವಸ್ಥಾಪಕ ನಿರ್ದೇಶಕರು, ಅಭಿಮಾನಿ ಸಮೂಹ ಸಂಸ್ಥೆರವರು, ಕಳೆದ 18 ವರ್ಷಗಳಿಂದ ಪತ್ರಿಕೆಯನ್ನು ಉಚಿತವಾಗಿ ಮುದ್ರಿಸಿಕೊಟ್ಟಿರುತ್ತಾರೆ. ಇವರಿಗೆ ನಮ್ಮ ಸಂಸ್ಥೆಯು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಿದೆ.

20 ವರ್ಷಗಳ ಕಾಲ ನಿರ್ವಾಹಕ ಸಂಪಾದಕರಾಗಿ ಕಾರ್ಯ ನಿರ್ವಹಿಸಿ ಓದುಗರ ಮೆಚ್ಚುಗೆಗೆ ಪಾತ್ರರಾಗಿರುವ ಶ್ರೀಯುತ ಕೊಕ್ಕಡ ವೆಂಕಟರಮಣ ಭಟ್ಟರಿಗೂ ಸಂಸ್ಥೆಯು ಆಭಾರಿಯಾಗಿದೆ.

ಹಾಗೂ ಹಿರಿಯ ಪತ್ರಕರ್ತರಾದ ಶ್ರೀಯುತ ಕೆ.ಎನ್. ರವಿರವರು ದಾದಾಜಿಯವರ ಮೇಲಿನ ಪ್ರೀತಿ ಮತ್ತು ಅಭಿಮಾನದ ಧ್ಯೋತಕದಂತೆ ಪತ್ರಿಕೆಯ ಗೌರವ ಸಂಪಾದಕರಾಗಿ ಕಾರ್ಯನಿರ್ವಹಿಸಲು ಒಪ್ಪಿರುತ್ತಾರೆ. ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– ಸಂಪಾದಕೀಯ


# ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ ಹಾಗೂ ಆಧ್ಯಾತ್ಮಿಕ ಚಿಂತನೆ.



ಆಧುನಿಕ ಜಗತ್ತಿನಲ್ಲಿ ಮಾನವರ ಜೀವನ ಶೈಲಿಯು ಹಿಂದಿನ ಸಮಾಜಕ್ಕಿಂತ ಭಿನ್ನವಾಗಿದ್ದು ಮಾನವರ ಜೀವನಕ್ರಮವು ವಿವಿಧ ಬಗೆಯ ಒತ್ತಡಗಳಿಂದ ಹಾಗೂ ಮಾನಸಿಕ ಅಸಮತೋಲನಗಳಿಂದ ಕೂಡಿರುವಂತಹ ಸಂಧಿಗ್ಧ ಪರಿಸ್ಥಿತಿಯನ್ನು ನಾವು ಗಮನಿಸುತ್ತಿದ್ದೇವೆ. ಇಂತಹ ಹಲವಾರು ಒತ್ತಡಗಳು ಹಾಗೂ ಸಮಸ್ಯೆಗಳ ನಡುವೆ ಜೀವಿಸುತ್ತಿರುವ ಮಾನವರ ಆಲೋಚನೆಗಳು ಚಿಂತನೆಗಳು ಹಾಗೂ ಅವರು ಕಾರ್ಯ ಪ್ರವೃತ್ತರಾಗಲು ಕೈಗೊಳ್ಳುತ್ತಿರುವ ತೀರ್ಮಾನಗಳು ಸಾಮಾಜಿಕ ಅಸಮತೋಲನಗಳಿಗೆ ಕಾರಣವಾಗುತ್ತಿದೆ. ಅನೇಕ ತೊಡಕುಗಳು ಅಥವಾ ಸಮಸ್ಯೆಗಳನ್ನು ನಿವಾರಿಸಿ ಮಾನವ ಜೀವಿಯ ಅಂತರಂಗದಲ್ಲಿ ಆತ್ಮಸ್ಥೈರ್ಯ ತುಂಬುವಂತಹ ಪ್ರಯತ್ನವನ್ನು ವಿವಿಧ ದೃಷ್ಟಿಕೋನಗಳಲ್ಲಿ ಹಾಗೂ ವಿಭಿನ್ನ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಇಂತಹ ವಿವಿಧ ಬಗೆಯ ದೃಷ್ಟಿಕೋನಗಳ ಪೈಕಿ ಆಧ್ಯಾತ್ಮ ಮತ್ತು ಧ್ಯಾನವು ಅತ್ಯಂತ ಪರಿಣಾಮಕಾರಿಯಾದಂತಹ ಸಾಧನವಾಗಿದೆ. ಆಧ್ಯಾತ್ಮ ಮತ್ತು ಧ್ಯಾನ ಮಾರ್ಗಗಳ ಮೂಲಕ ಮಾನವರ ವಿಷಮ ಮನಸ್ಥಿತಿಯನ್ನೂ ಸಹ ಬದಲಾಯಿಬಹುದು ಎಂಬುದಾಗಿ ಅತ್ಯಂತ ಬಲವಾಗಿ ನಂಬಿದ್ದಂತಹ ಶ್ರೀ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರು ನಿತ್ಯ ಬದುಕಿನ ಜೀವನ ಜಂಜಾಟದಲ್ಲಿ ಸಿಲುಕಿ ನರಳುತ್ತಿರುವ ಜನರಿಗೆ ಧ್ಯಾನ, ಯೋಗ, ಪ್ರಾಣಾಯಾಮಗಳ ಮೂಲಕ ಜನರ ಮನದಲ್ಲಿ ಭಕ್ತಿ ಮತ್ತು ಆಧ್ಯಾತ್ಮಿಕ ಭಾವನೆಗಳನ್ನು ಮೂಡಿಸಿ ಜನರ ಜೀವನ ಮಟ್ಟವನ್ನು ಉನ್ನತೀಕರಿಸುವ ಸದುದ್ದೇಶವನ್ನಿಟ್ಟುಕೊಂಡು ಶ್ರೀ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರು ಮಂಡ್ಯ ನಗರದಲ್ಲಿ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರವನ್ನು ಸುಮಾರು 3 ದಶಕಗಳ ಹಿಂದೆಯೇ ಅಂದರೇ 1991ರಲ್ಲಿ ಸ್ಥಾಪಿಸಿದರು.


ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ಮೂಲಕ ಶ್ರೀ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರು ಜನರಲ್ಲಿ ಸುಪ್ತವಾಗಿ ಅಡಗಿದ್ದಂತಹ ಆಧ್ಯಾತ್ಮಿಕ ಭಾವನೆಯ ಮೌಲ್ಯವನ್ನು ಹೊರತೆಗೆಯುವಂತಹ ನಿಷ್ಕಲ್ಮಶ ಪ್ರಯತ್ನದ ಮೂಲಕ ಆದ್ಯಾತ್ಮಿಕ ಜಗತ್ತಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಇದಕ್ಕೆ ಪೂರಕವೆಂಬಂತೆ ಪ್ರತೀ ಶುಕ್ರವಾರ ಮತ್ತು ಶನಿವಾರಗಳಂದು ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ಗೋವಿಂದ ಸಭಾಂಗಣದಲ್ಲಿ ಭಜನೆಗಳನ್ನು ಏರ್ಪಾಟು ಮಾಡಿ ದೇವರ ಧ್ಯಾನದಲ್ಲಿ ತಲ್ಲೀನರನ್ನಾಗಿಸಿ ಭಗವಂತನ ಕೃಪಾ ಕಟಾಕ್ಷದೊರೆಯುವಂತೆ ಅನುವು ಮಾಡಿಕೊಟ್ಟಿದ್ದಾರೆ. ಈ ಮೂಲಕ ಮಾನಸಿಕ ನೆಮ್ಮದಿ ಮತ್ತು ಶಾಂತಿಯನ್ನು ಜನರ ಮನದಲ್ಲಿ ಮೂಡಿಸುವುದರ ಮೂಲಕ ಸಮಾಜಮುಖೀ ಕಾರ್ಯಗಳನ್ನು ಸ್ವಾಮೀಜಿಯವರು ಧ್ಯಾನ ಕೇಂದ್ರದ ಮುಖಾಂತರ ನಡೆಸುತ್ತಾ ಬಂದಿರುವುದು ಆಧ್ಯಾತ್ಮಿಕ ಕ್ಷೇತ್ರಕ್ಕೆ ಸ್ವಾಮೀಜಿಯವರು ನೀಡಿರುವ ಬಹುದೊಡ್ಡ ಕೊಡುಗೆ ಎಂಬುದಾಗಿ ನಾವು ಸ್ಮರಿಸಬಹುದು.

ಹಾಗೆಯೇ ಈ ಧ್ಯಾನ ಕೇಂದ್ರಕ್ಕೆ ದೇಶದರಾಜ್ಯದ ಹೆಸರಾಂತ ಪ್ರಖ್ಯಾತ ಯತಿಗಳು, ವಿದ್ವಾಂಸರು, ಸಾಧು ಸಂತರು ಭೇಟಿ ನೀಡಿ ಪ್ರವಚನಗಳನ್ನು ನೀಡುವುದರ ಮುಖಾಂತರ ಆಧ್ಯಾತ್ಮ ಜೀವನದ ಮೌಲ್ಯವನ್ನು ಪರಿಚಯಿಸಿದ್ದಾರೆ. ಹೀಗೆ ಸ್ವಾಮೀಜಿಯವರು ನಿಸ್ವಾರ್ಥ ಜೀವಿತಾವಧಿಯಲ್ಲಿ ಶೈಕ್ಷಣಿಕ ಸಾಧನೆಗಳ ಹಾಗೂ ಸೇವೆಗಳ ಜೊತೆಜೊತೆಗೆ ಆಧ್ಯಾತ್ಮ ಕ್ಷೇತ್ರದಲ್ಲಿಯೂ ಕೂಡ ತಮ್ಮ ಸೇವೆಯನ್ನು ಸಮರ್ಪಿಸುವುದರ ಮೂಲಕ ಜನರ ಮನದಲ್ಲಿ ಇಂದಿಗೂ ನೆಲೆಗೊಂಡಿದ್ದಾರೆ. ಶ್ರೀ ಶ್ರೀ ಶ್ರೀಅನಂತಕುಮಾರ ಸ್ವಾಮೀಜಿರವರ ಕಾಲಾ ನಂತರವೂ ಸಹ ಶ್ರೀಗಳ ಆಸೆ ಅಭಿಲಾಷೆಗಳನ್ನು ಸಮರ್ಥವಾಗಿ ಅದರ ಜೊತೆ ವಿವಿಧ ಚಟುವಟಿಕೆಗಳ ಮೂಲಕ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರವನ್ನು ಇನ್ನಷ್ಟು ಉನ್ನತೀಕರಿಸುವುದರ ಮೂಲಕ ಶ್ರೀ ಶಿವಮೂರ್ತಿ ಕೀಲಾರರವರು ತಮ್ಮ ಗುರುಗಳು ಹಾಕಿಕೊಟ್ಟಿರುವಂತಹ ಮಾರ್ಗದಲ್ಲಿಯೇ ನಡೆಯುತ್ತಿರುವುದು ಶ್ರೀ ವೆಂಕಟೇಶ್ವರರಲ್ಲಿ ಐಕ್ಯರಾದ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿರವರ ಆತ್ಮವು ಸಂತಸ ಪಡುವುದರಲ್ಲಿ ಕಾರಣೀಭೂತರಾಗಿದ್ದಾರೆ. ಹೀಗೆ ಸ್ವಾಮೀಜಿಯುವರ ಆಶಯದಂತೆ ಜನರಲ್ಲಿ ಆಧ್ಯಾತ್ಮಿಕ ಭಾವನೆಯನ್ನು ಮೂಡಿಸುತ್ತಿರುವ ಸತ್ಕಾರ್ಯವು ಅತ್ಯಂತ ಪ್ರಶಂಸನೀಯವಾದುದು.



– ಲವ ಬಿ.ಪಿ.
ಎಸ್.ವಿ.ವಿ.ಎನ್. ಪ್ರೌಢಶಾಲೆ, ಕಾಳೇನಹಳ್ಳಿ

## ಶ್ರೀ ವೈಕುಂಠ ವಾರ್ತಾ ಸ್ಥಾಪಕ ಸಂಪಾದಕನಾಗಿ (ನೆನಪಿನಂಗಳದಿಂದ)



ಎತ್ತಣಿಂದೆತ್ತ ಸಂಬಂಧವಯ್ಯ! ನನ್ನ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ, ಹಾಗೂ ಸೌತಡ್ಕ ಕ್ಷೇತ್ರಗಳ ಸಮೀಪದ ಕೊಕ್ಕಡವೆಂಬ ಪುಟ್ಟ ಹಳ್ಳಿ. ಪೂಜ್ಯ ಅನಂತಕುಮಾರ ಸ್ವಾಮೀಜಿಯವರ ಹುಟ್ಟೂರು. ಉತ್ತರದ ಪವಿತ್ರ ಕ್ಷೇತ್ರ ವಾರಣಾಸಿ. ಅನಂತಕುಮಾರ ಸ್ವಾಮೀಜಿಯವರು ಮಾಂಡವ್ಯ ಮುನಿಯ ಪವಿತ್ರ ಭೂಮಿ ಮಂಡ್ಯಕ್ಕೆ ಪಾದಾರ್ಪಣೆ ಮಾಡಿ ಹತ್ತು ವರ್ಷಗಳಲ್ಲಿ ಉದ್ಯೋಗ ನಿಮಿತ್ತವಾಗಿ ನಾನು ಮಂಡ್ಯಕ್ಕೆ ಬಂದವನಾದೆ. ಮಂಡ್ಯ ನಗರದ ಜಿಲ್ಲಾಧಿಕಾರಿಗಳ ಕಛೇರಿಯ ಕೂಗಳತೆ ದೂರದಲ್ಲಿರುವ ಪ್ರತಿಷ್ಠಿತ ಕಾರ್ಮೆಲ್ ಕಾನ್ವೆಂಟ್ ಪ್ರೌಢಶಾಲೆಯಲ್ಲಿ ಸಂಸ್ಕೃತ ಶಿಕ್ಷಕನಾಗಿ ಬಂದ ನನಗೆ ಅದೇನೋ ಪುಣ್ಯ ವಿಶೇಷದ ಸೆಳೆತವೋ ಎಂಬಂತೆ ಶ್ರೀ ಶ್ರೀಅನಂತಕುಮಾರ ಸ್ವಾಮೀಜಿಯವರೊಂದಿಗೆ ಕಾರಣಗಳಿಲ್ಲದೆ ಆತ್ಮೀಯ ಒಡನಾಟ, ಆಧ್ಯಾತ್ಮಿಕ ಸಂಬಂಧ, ಭಾಷಾ ಅಧ್ಯಾಪಕನಾದುದರಿಂದ ಭಾಷಾ ಬಾಂಧವ್ಯದ ಸಂಬಂಧವೂ ಘನವಾಗಿ ಬೆಸೆಯಿತು.

1979 ರಲ್ಲಿ ನಾನು ಮಂಡ್ಯಕ್ಕೆ ಬಂದಾಗ ಅಭಿನವ ಭಾರತಿ ವಿದ್ಯಾಕೇಂದ್ರವು ಇನ್ನೂ ಬಾಡಿಗೆಯ ಗುಡಿಸಲಿನಂತಹ ಕಟ್ಟಡಗಳಲ್ಲಿ ನಡೆಯುತ್ತಿದ್ದವು. ಸ್ವಾಮೀಜಿಯವರು ಅ ಸಣ್ಣ ಕಛೇರಿಯ ಸನಿಹದಲ್ಲಿ ಬಾಡಿಗೆ ಮನೆಯೊಂದರಲ್ಲಿ ಪುಟ್ಟ ಮಕ್ಕಳ ಹಾಸ್ಟೆಲ್‌ನಲ್ಲಿಯೇ ವಾಸ್ತವ್ಯವಿದ್ದರು. ಅಭಿನವ ಭಾರತಿ ಶಾಲೆಯ ಹಾಸ್ಟೆಲ್ ಎದುರಿನಿಂದಲೇ ನನ್ನ ಶಾಲೆಗೆ ಸೈಕಲ್ ಮೂಲಕ ಹೋಗುತ್ತಿದ್ದೆ. ಉತ್ತರ ಭಾರತದ ಆನಂದ ಮಾರ್ಗ ಸಂಸ್ಥೆಯು ಮಂಡ್ಯದಲ್ಲಿ ತೆರೆದಿದ್ದ ಶಾಲೆಯ ಸುಪರ್ದಿಯನ್ನು ವಹಿಸಿಕೊಳ್ಳುವುದಕ್ಕಾಗಿ ಶ್ರೀ ಅನಂತಕುಮಾರ್ ಮಂಡ್ಯಕ್ಕೆ ಬಂದವರು. ಆನಂದ ಮಾರ್ಗ ಸಂಘಟನೆಯು ತೀವ್ರವಾದಿ ಹಿಂದೂ ಸಣಂಘಟನೆ ಎಂಬುದನ್ನು ಕೇಳಿದ್ದೆ. ಆನಂದ ಮಾರ್ಗ ಸಂಘಟನೆಯು ನಡೆಯುತ್ತಿರುವ ಶಾಲೆಯು ಭಾರತೀಯ ಸಂಸ್ಕೃತಿ ಸಂಸ್ಕಾರ ಮೂಡಿಸುವ ಶಿಕ್ಷಣ ಸಂಸ್ಥೆ ಎಂಬುದೂ ಅರಿವಿತ್ತು.

ಮಂಡ್ಯದಲ್ಲಿದ್ದ ಈ ಶಾಲೆಯ ಶಿಕ್ಷಕರಾಗಿ ಬಂದಿದ್ದ ಶ್ರೀ ಅನಂತಕುಮಾರ್ ಅವರನ್ನು ಜನರೆಲ್ಲಾ ಪ್ರೀತಿಯಿಂದ "ದಾದಾ" , "ದಾದಾಜಿ" ಎಂದು ಕರೆಯುತ್ತಿದ್ದರು. ಉತ್ತರ ಭಾರತದ ಕಡೆಗಳಲ್ಲಿ ಅಜ್ಜ, ದೊಡ್ಡಪ್ಪ, ಚಿಕ್ಕಪ್ಪ, ಮೊದಲಾದ ಹಿರಿಯರನ್ನು ಪ್ರೀತಿಯಿಂದ, ಅಕ್ಕರೆಯಿಂದ ಗೌರವ ವಾಚಕವಾಗಿ "ದಾದಾ" ಎಂದು ಕರೆಯುವುದು ರೂಢಿಯಲ್ಲಿದೆ. ದಕ್ಷಿಣ ಭಾರತದಲ್ಲಿ "ಕಾಕಾ" ಎಂಬ ಪದ ಬಳಕೆಯಿದ್ದರೂ "ದಾದಾ" ಪದ ಬಳಕೆ ಇಲ್ಲ. ಇಲ್ಲೆಲ್ಲಾ 'ದಾದಾ' ಎಂಬ ಪದ ಕೇಳಿದೊಡನೆ 'ದಾದಾಗಿರಿ', ರೌಡಿಸಂ ಎಂಬ ಅರ್ಥಚ್ಛಾಯೆಯ ಭಾವನೆ ಜನರಿಗೆ ಮೂಡುತ್ತದೆ. "ದಾದಾ' ಎಂದೇಕೆ ಕರೆಯುತ್ತಾರೆ ಎಂದು ಆರಂಭದ ದಿನಗಳಲ್ಲಿ ಅವರಿವರಲ್ಲಿ ಕೇಳಿ ಅರಿತುಕೋಳ್ಳುವ ಪ್ರಯತ್ನ ಮಾಡಿದ್ದೆ.

ಸಣಕಲುದೇಹದ ಶ್ಯಾಮಲ ತನುವಿನ ತಲೆಗೊಂದು ಕಂದು ಬಣ್ಣದ ಉಣ್ಣೆಯ ಟೋಪಿ ಧರಿಸಿದ ಸಾಮಾನ್ಯ ಹಳ್ಳಿ ಮನುಷ್ಯನ ದಿರಿಸು. ಮೂಗಿನ ಮೇಲೆ ಕನ್ನಡಕ. ಆಗ ಉತ್ತರ ಭಾರತದ ಶೈಲಿಯಲ್ಲಿ ಅನಂತ್‌ಕುಮಾರ್‌ಅವರು ಬಿಳಿಯ ಪೈಜಾಮ, ಬಿಳಿಯ ನಿಲುವಂಗಿ ಧರಿಸುತ್ತಿದ್ದರು ಸ್ವಾಮೀಜಿ.

ಅದಾವುದೋ ಒಂದು ದಿನ ನಾನು ಶಾಲೆಗೆ ಹೋಗುತ್ತಿದ್ದಾಗ ಅವರು ಹಾಸ್ಟೆಲಿನ ಎದುರಲ್ಲಿ ಪುಟ್ಟ ಮಕ್ಕಳೊಡನೆ ಅಕ್ಕರೆಯಿಂದ ಮಾತನಾಡಿಸುತ್ತಾ ನಿಂತಿದ್ದರು. ನನಗವರ ಬಗೆಗೆ ಒಂದಷ್ಟು ವಿಷಯಗಳ ಅರಿವಿತ್ತು, ಗೌರವದ ಭಾವವಿತ್ತು. ಸೈಕಲ್ ನಿಲ್ಲಿಸಿ ನಮಸ್ಕರಿಸಿದೆ, ಪರಿಚಯಿಸಿಕೊಂಡೆ. ಕಾರ್ಮೆಲ್ ಕಾನ್ವೆಂಟ್ ಪ್ರೌಢಶಾಲೆಯಲ್ಲಿ ಸಂಸ್ಕೃತ ಶಿಕ್ಷಕನೆಂಬುದನ್ನು ತಿಳಿದು ಅವರಿಗೆ ನನ್ನ ಬಗೆಗೆ ತುಸು ವಿಶೇಷ ಸೆಳೆತವಿದ್ದೆನಿಸಿತು. ಜೊತೆಗೆ ಕಾನ್ವೆಂಟಿನಲ್ಲೂ ಸಂಸ್ಕೃತ ಬೋಧನೆಗೆ ಅವಕಾಶ ನೀಡುತ್ತಿದ್ದಾರೆ ಎಂಬುದು ಅವರಿಗೆ ತುಸು ಅಚ್ಚರಿಯೆನಿಸಿತು.

ಶ್ರೀ ಅನಂತ್‌ಕುಮಾರ್ ದಾದಾಜಿಯವರು ಮಂಡ್ಯಕ್ಕೆ

ಬಂದಂದಿನಿಂದಲೂ ಶಾಲೆಯಲ್ಲಿ ಮಕ್ಕಳೊಡನೆ ಮತ್ತು ಶಾಲಾ ಮಕ್ಕಳ ಪೋಷಕರೊಡನೆ ಕನ್ನಡದಲ್ಲೇ ವ್ಯವಹರಿಸ ತೊಡಗಿದರು. ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ಆರಂಭಿಸಿದರು. ಮಂಡ್ಯದಲ್ಲಿ ಬಹುತೇಕ ಒಕ್ಕಲಿಗರು. ಮಂಡ್ಯ ಜನರೊಡನೆ ಮಾತನಾಡುತ್ತಾ ಕನ್ನಡಕಲಿತ ಕಾರಣದಿಂದ ಅವರ ಮಾತು ಮಂಡ್ಯ ಕನ್ನಡವಾಯಿತು. ಅದೇಕೋ ಸ್ವಾಮೀಜಿಯವರು ಕನ್ನಡವನ್ನು ಮಾತನಾಡಲು ರೂಡಿಸಿಕೊಂಡ ಆಸಕ್ತಿಯನ್ನು ಬರವಣಿಗೆಯತ್ತ ಹೊರಳಿಸದಿರುವುದು ಒಗಟಿನ ಪ್ರಶ್ನೆಯಾಗೇ ಉಳಿಯಿತು.

ಅಭಿನವ ಭಾರತಿ ವಿದ್ಯಾ ಸಂಸಂಸ್ಥೆಯನ್ನು ಸ್ಥಾಪಿಸಿ ಅದರ ಬೆಳವಣಿಗೆ, ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆಯ ರಾಷ್ಟ್ರೆದೆತ್ತರದ ಹೆಗ್ಗಳಿಕೆಗಳಲ್ಲಿ ಪೂಜ್ಯ ಅನಂತ್‌ಕುಮಾರ ಸ್ವಾಮೀಜಿಯವರದ್ದು ವಿರಾಮವಿಲ್ಲದ ನಿರಂತರ ಸಾಹಸ ಪ್ರವೃತ್ತಿ. ಸುಭಾಷ್ ನಗರದ ಮೂಲೆಯೊಂದರಲ್ಲಿ ಹರಕುಗುಡಿಸಲಲ್ಲಿ ಐದು ಮಂದಿ ಪುಟಾಣಿಗಳಿಂದ ಉದಯಿಸಿದ ಶಿಕ್ಷಣ ಸಂಸ್ಥೆ.ಇಂದು ಮಂಡ್ಯಜಿಲ್ಲೆಯ ಹಳ್ಳಿಗಳತ್ತ ಸಂಸ್ಥೆಯ ಶಾಲೆಗಳನ್ನು ಭಾರತೀಯ ಧರ್ಮಸಂಸ್ಕೃತಿಯ ಬುನಾದಿಯೊಂದಿಗೆ ಕೊಂಡೊಯ್ದು ನಾಡಿನೆಲ್ಲೆಡೆ ಕೀರ್ತಿಧ್ವಜವನ್ನು ಕೊಂಡೂಯ್ಯುತ್ತಿರುವುದು ಮಂಡ್ಯಕ್ಕೊಂದು ಅಮರಕಾಣಿಕೆ.


ಅಭಿನವ ಭಾರತಿ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳೆಂದರೆ ಯೋಗಾಸನ, ಮಲ್ಲಕಂಬ, ಗಣಿತ, ವಿಜ್ಞಾನ, ಪ್ರಾಯೋಗಿಕ ವಸ್ತು ಪ್ರದರ್ಶನಗಳಲ್ಲಿ ಅವರಿಗೆ ಸರಿಗಟ್ಟುವವರು ಜಿಲ್ಲೆಯಲ್ಲಿಯಾರು ಇಲ್ಲವೆಬಂತಹ ಪ್ರಭಾವ ಮುದ್ರೆಯನ್ನು ಮೂಡಿಸುವಲ್ಲಿ ಅನಂತಕುಮಾರ ಸ್ವಾಮೀಜಿಯವರು ಪರಿಶ್ರಮದ ಶ್ರದ್ಧೆ ಪ್ರತಿರೂಪವಾಗಿದ್ದರು.

1997 ರಲ್ಲಿ ಶ್ರೀ ಶ್ರೀ ಸ್ವಾಮೀಜಿಯವರು ಮಂಡ್ಯದಲ್ಲಿ ಶ್ರೀ ವೆಂಕಟೇಶ್ವರಧ್ಯಾನ ಕೇಂದ್ರವನ್ನು ಸ್ಥಾಪಿಸಿದರು. ಮೊದಲಿನಿಂದಲೂ ಧ್ಯಾನ, ಭಜನೆ, ಸತ್ಸಂಗಗಳ ಸಂಸ್ಕಾರವುಳ್ಳ ನನಗೆ ಧ್ಯಾನಕೇಂದ್ರದ ಬಗೆಗೆ ವಿಶೇಷ ಒಲವು ಮೂಡಿದ್ದು ಸಹಜ.ಸಾಪ್ತಾಹಿಕ ಭಜನೆ, ಸತ್ಸಂಗ ಪ್ರಸಾದ ವಿನಯೋಗದಿಂದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸುಮಾರು 30 – 40 ಜನಭಕ್ತರು ಭಜನೆ ಸತ್ಸಂಗ ಕೂಟದಲ್ಲಿ ಭಾಗಿಯಾಗುತ್ತಿದ್ದರು. ಸ್ವಾಮೀಜಿಯವರು ತಾವೇ ತಾಳ ಹಿಡಿದು ಎತ್ತರದದನಿಯಿಂದ "ಶ್ರಿ ರಾಂ ಜೈರಾಂ ಜೈ ಜೈರಾಂ" "ಗೋವಿಂದ ಭೋಲೋ ಹರಿಗೋಪಾಲ್ ಭೋಲೂ" ಎಂಬ ಭಜನೆಯನ್ನು ಹೇಳಿಕೊಡುತ್ತಿದ್ದರು.

ಶ್ರೀ ವಂಕಟೇಶ್ವರ ಧ್ಯಾನ ಕೇಂದ್ರದಿಂದ ಶ್ರೀ ಶ್ರೀಅನಂತಕುಮಾರ ಸ್ವಾಮೀಜಿಯವರು ಹನ್ನೆರಡು ದಿನಗಳ ಧ್ಯಾನ – ಪ್ರಾಣಾಯಾಮಗಳ ತರಬೇತಿ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದರು. ನಾನು ಉಜಿರೆಯಲ್ಲಿ ಮಹೇಶಯೋಗಿವನ ಟ್ರಾನ್ಸೆಂಡೆಂಟಲ್ ಮೆಡಿಟೇಷನ್ ತರಬೇತಿ ಪಡೆದಿದ್ದೆ. ರಾಮಕೃಷ್ಣ ಮಠದ ನೈತಿಕ ಆಧ್ಯಾತ್ಮಿಕ ಶಿಬಿರಗಳ ಅನುಭವ ಪಡೆದಿದ್ದೆ. ಉಜಿರೆಯಲ್ಲಿ ಸಿದ್ಧವನ ಗುರುಕುಲವಾಸದ ಶಿಸ್ತುಬದ್ಧ ಆಧ್ಯಾತ್ಮಿಕ ಪರಿಸರದಲ್ಲಿ ಬೆಳೆದುದರಿಂದ ಭಗವದ್ಗೀತೆಯ ಸಾರದ ಅರಿವು ಅನುಷ್ಠಾನಗಳ ಸಂಸ್ಕೃತಿಯುಳ್ಳವನಾಗಿದೆ. ಈ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಒಲವಿರುವುದರಿಂದ ಶ್ರೀ ಅನಂತಕುಮಾರ ಸ್ವಾಮೀಜಿಯವರು ಹಮ್ಮಿಕೊಳ್ಳುತ್ತಿದ್ದ ಧ್ಯಾನ – ಪ್ರಾಣಾಯಾಮ ಶಿಬಿರಗಳಲ್ಲೂ ಭಾಗಿಯಾಗಿ ಸಿದ್ಧಿ ಸಮಾಧಿ ಯೋಗದ ಧ್ಯಾನ – ಪ್ರಾಣಾಯಾಮದ ಪರಿಮಳವು ನನ್ನೊಳಗೆ ಉದಿಸಲು ಕಾರಣವಾಯಿತು.

ಉಪಚಾರೊಂದಿಗೂ. ಬಿಂಬಿಸಿಕೊಳ್ಳಲು ಪ್ರದರ್ಶಿಸಿಕೊಳ್ಳಲು ಇಷ್ಟಪಡದ ನನ್ನ ಸರಳ ಸ್ವಭಾವ ಸ್ವಾಮೀಜಿಯವರಿಗೆ ಇಷ್ಟವಾಗುತ್ತಿತ್ತು. ಧ್ಯಾನ ಕೇಂದ್ರವು ಪ್ರತೀವರ್ಷ ನಡೆಸುತ್ತಿದ್ದ ಧ್ಯಾನ ಅನುಷ್ಠಾನ ಆಧ್ಯಾತ್ಮಿಕ ಹೊರ ಸಂಚಾರಗಳಿಗೆ ಹೋಗುತ್ತಿದ್ದೆ. ಸ್ವಾಮೀಜಿಯವರು ನಿಸರ್ಗದ ಪ್ರಶಾಂತವಾದ ಗಿರಿಬೆಟ್ಟಗಳ ತಪ್ಪಲಲ್ಲಿ ನಡೆಸುತಿದ್ದ ಪ್ರಕೃತಿ ಧ್ಯಾನವು ವಿಶಿಷ್ಟವಾದ ರೋಮಾಂಚನ ಅನುಭೂತಿಯನ್ನುಂಟು ಮಾಡುತ್ತಿತ್ತು. ತಿರುಪತಿಗೆ ಹೋದರೆ ಆ ಜನಸಾಗರದ ನಡುವೆಯೂ ಧ್ಯಾನ ದಿಂದ ಮನಸ್ಸನ್ನು ಹೇಗೆ ಕೇಂದ್ರೀಕರಿಸ ಬಹುದೆಂಬುದನ್ನು ಸ್ವಾಮೀಜಿ ಸಾಮೂಹಿಕ ಧ್ಯಾನದಿಂದ ಮಾರ್ಗದರ್ಶನ ಮಾಡಿಸುತ್ತಿದ್ದರು.

ಮುಂದಿನ ಸಂಚಿಕೆಗೆ ಮುಂದುವರಿಯುವುದು



-ಕೊಕ್ಕಡ ವೆಂಕಟರಮಣ ಭಟ್.

# ಭಕ್ತ ಮತ್ತು ದೇವರ ಅವಿನವಭಾವ ಸಂಬಂಧ



ಮಹಾಭಾರತ ಯುದ್ಧದ ನಂತರ ಶ್ರೀಕೃಷ್ಣ ಮತ್ತು ಅರ್ಜುನ ದ್ವಾರಕಾ ನಗರಿಗೆ ಹೋದರು. ಈ ಬಾರಿ ಅರ್ಜುನನೇ ರಥವನ್ನು ನಡೆಸಿದನು. ದ್ವಾರಕೆ ತಲುಪಿದಾಗ ಅರ್ಜುನನು ತುಂಬಾ ಬಳಲಿದ್ದನು. ಆದುದರಿಂದ ವಿಶ್ರಾಂತಿ ಪಡೆಯಲು ಅತಿಥಿ ಭವನಕ್ಕೆ ತೆರಳಿದನು. ಸಂಜೆಯ ವೇಳೆ ರುಕ್ಮಿಣಿಯು ಶ್ರೀಕೃಷ್ಣನಿಗೆ ಊಟವನ್ನು ಬಡಿಸಿದಳು. ಆಗ ಶ್ರೀ ಕೃಷ್ಣನು, "ಮನೆಗೆ ಅತಿಥಿ ಬಂದಿದ್ದಾರೆ. ಅವರನ್ನು ಬಿಟ್ಟು ಹೇಗೆ ಊಟ ಮಾಡಲಿ?".

ರುಕ್ಮಿಣೀ, "ಭಗವನ್ ನೀವು ಊಟವನ್ನು ಆರಂಭಿಸಿರಿ, ನಾನು ಹೋಗಿ ಅರ್ಜುನನ್ನು ಕರೆತರುತ್ತೇನೆ" ಎಂದು ಹೇಳಿ, ಅತಿಥಿ ಭವನಕ್ಕೆ ಹೋದಾಗ ಅರ್ಜುನನು ನಿದ್ರಿಸುತ್ತಿದ್ದನು ಹಾಗೂ ಅವನ ರೋಮ-ರೋಮದಲ್ಲಿ ಕೃಷ್ಣನಾಮದ ಕೀರ್ತನೆ ಹೊರ ಹೊಮ್ಮುತ್ತಿತ್ತು. ಹೀಗಾಗಿ ರುಕ್ಮಿಣಿಯು ಕೃಷ್ಣನನ್ನು ಮರೆತು, ಮೆಲ್ಲನೆ ಚಪ್ಪಾಳೆ ತಟ್ಟುತ್ತಾ ಕೃಷ್ಣನಾಮದಲ್ಲಿ ತಲ್ಲೀನನಾದಳು.

ಇತ್ತ ನಾರದರು ಶ್ರೀಕೃಷ್ಣನ ಬಳಿ ಬಂದು, "ಭಗವಾನ್ ಭೋಜನತಣ್ಣಗಾಗುತ್ತಿದೆ" ಎಂದಾಗ, ಕೃಷ್ಣನು,"ಅತಿಥಿ ಬರದೇ ಭೋಜನ ಮಾಡಲಾರೆ" ಎಂದನು. ನಾರದರು, "ನಾನು ಹೋಗಿ ಅರ್ಜುನನ್ನು ಕರೆತರುತ್ತೇನೆ" ಎಂದು ಹೇಳಿ ಅತ್ತ ಹೋದಾಗ ಅಲ್ಲಿನದೃಶ್ಯ ನೋಡಿ, ಅರ್ಜುನನನ್ನು ಎಬ್ಬಿಸುವ ಬದಲು ತಮ್ಮ ವೀಣೆಯನ್ನು ನುಡಿಸಲು ಪ್ರಾರಂಭಿಸಿದರು.

ಸತ್ಯಭಾಮೆಯು ಕೃಷ್ಣನಿಗೆ, 'ಭಗವನ್, ಭೋಜನ ತಣ್ಣಗಾಗುತ್ತಿದೆ, ನೀವು ಆರಂಭವಾದರೂ ಮಾಡಿ. ಕೃಷ್ಣನು, "ಅತಿಥಿ ಬರದೇ ಭೋಜನ ಮಾಡಲಾರೆ"

ಸತ್ಯಭಾಮೆಯು, "ನಾನು ಹೋಗಿ ಕರೆತರುತ್ತೇನೆ" ಎಂದು ಹೇಳಿ ಅರ್ಜುನನಿರುವಕಡೆಗೆ ಹೋದಾಗ, ನಿದ್ರಿಸುತ್ತಲೇ ಇದ್ದ ಅರ್ಜುನನನ್ನು ರೋಮ-ರೋಮದಿಂದ ಹೊರಹೊಮ್ಮುತ್ತಿದ್ದ 'ಕೃಷ್ಣ ನಾಮ ಕೀರ್ತನೆಯಿಂದಾಗಿ' ರುಕ್ಮಿಣಿಯು ಚಪ್ಪಾಳೆ ತಟ್ಟುತ್ತಿದ್ದಳು, ನಾರದರು ವೀಣೆಯನ್ನು ನುಡಿಸುತ್ತಿದ್ದರು. ಸತ್ಯಭಾಮೆಯೂ ನರ್ತಿಸಲು ಪ್ರಾರಂಭಿಸಿದಳು.

ಇಲ್ಲಿಕೃಷ್ಣ, "ಎಲ್ಲರೂ ನನ್ನ ಭೋಜನ ತಣ್ಣಗಾಗುತ್ತಿದೆ ಯೆಂದೂ, ಅರ್ಜುನನ್ನು ಕರೆತರುವುದಾಗಿ ಹೇಳಿ ಹೊರಟವರು ಎಲ್ಲಿ? ನನ್ನ ಚಿಂತೆಯಾರಿಗೂಇಲ್ಲ. ನಾನೇ ಹೋಗಿ ಅಲ್ಲೇನಾಗುತ್ತಿದೆ ಎಂದು ನೋಡುವೆ" ಎಂದು ಅರ್ಜುನ ನಿದ್ರಿಸುತ್ತಿದ್ದ ಅತಿಥಿ ಭವನಕ್ಕೆ ಹೋಗಿ ನೋಡಿದಾಗ, ಅಲ್ಲಿ ಸ್ವರ ಲಹರಿ ನಡೆಯುತ್ತಿತ್ತು.

ಅರ್ಜುನ ಮಲಗಿ ಕೊಂಡೇ ಕೀರ್ತನೆ ಮಾಡುತ್ತಿದ್ದಾನೆ.
ರುಕ್ಮಿಣಿಯು ಚಪ್ಪಾಳೆ ತಟ್ಟುತ್ತಿದ್ದಾಳೆ.
ನಾರದರು ವೀಣೆಯನ್ನು ನುಡಿಸುತ್ತಿದ್ದಾರೆ.
ಮತ್ತು ಸತ್ಯಭಾಮೆಯು ನೃತ್ಯ ಮಾಡುತ್ತಿದ್ದಾಳೆ.
ಈ ದೃಶ್ಯವನ್ನು ನೋಡಿಕೃಷ್ಣನ ಕಣ್ಣುಗಳಲ್ಲಿ ಆನಂದ ಭಾಷ್ಪ ಸುರಿಯತೊಡಗಿತು ಹಾಗೂ ಸ್ವಯಂ ಅರ್ಜುನನ ಕಾಲುಗಳನ್ನು ಒತ್ತತೊಡಗಿದನು.

ಕೃಷ್ಣನ ಕಣ್ಣೀರು ಅರ್ಜುನನ ಕಾಲುಗಳ ಮೇಲೆ ಬಿದ್ದಾಗ ಎಚ್ಚರಗೊಂಡು ಗಲಿಬಿಲಿಯಾದ ಅರ್ಜುನನು, "ಪ್ರಭು ಇದೇನಾಗುತ್ತಿದೆ...? ಎಂದಾಗ,
ಕೃಷ್ಣನೆಂದನು, "ಅರ್ಜುನಾ, ನಿನ್ನರೋಮ-ರೋಮದಲ್ಲಿ ನನ್ನನ್ನು ಆವರಿಸಿಕೊಂಡಿದ್ದೀಯಾ.ಆದುದರಿಂದ ನೀನು ನನಗೆ ತುಂಬಾ ಪ್ರಿಯನಾಗಿದ್ದೀಯಾ ಎಂದು ಹೇಳಿ ಅರ್ಜುನನ್ನು ಪ್ರೇಮದಿಂದ ಆಲಂಗಿಸಿಕೊಂಡನು.
ಲೀಲಾಧಾರಿಯಾದಕೃಷ್ಣನೇ,
ಭಕ್ತನೂ ನೀನೇ..
ದೇವನೂ ನೀನೇ...
ಮಾಡುವವನೂ ನೀನೇ....
ಮಾಡಿಸುವವನೂ ನೀನೇ.....

ಭಕ್ತ ಮತ್ತು ದೇವರಿಗೆ ಜಯವಾಗಲಿ......

ಯಾರ ಆಚರಣೆಗಳು ಪೂಜಿಸಲು ಯೋಗ್ಯವಾಗಿದೆಯೋ ಅಂತಹವರ ಚರಣಗಳನ್ನೇ ಪೂಜಿಸಲಾಗುತ್ತದೆ.



- ಕೆ. ಎನ್. ರವಿ



# ನಿಷ್ಕಾಮ ಯೋಗಿ

" ತೀರ್ಥಯಾತ್ರೆಗೆ ಫಲ ಒಂದು ಸಾಧು ಸಂಗಕೆ ನಾಲ್ಕು ಸದ್ಗುರು ಸಂಗಕ್ಕೆ ಅನೇಕ ಫಲವು ಇದುವೇ ಸಂತರ ಮತವು" ಎಂಬುದು ಸಂತಕಿತಹ ಸದ್ಗುರುವಿನ ಸಂಗ ದೊರಕಿದ್ದು ನನ್ನ ಜೀವನದ ಒಂದು ಮಹತ್ವದ ಸಂಗತಿ ಎಂದೇ ನನ್ನ ಭಾವನೆ. ಸುಮಾರು ಹದಿಮೂರು ವರ್ಷಗಳ ಹಿಂದೆ ಮನುಷ್ಯ ಜೀವನದ ಗುರಿ ಏನು ಎಂಬುದನ್ನು ತಿಳಿಯದೆ ಗೊತ್ತುಗುರಿ ಇಲ್ಲದೇ ಜೀವನ ನಡೆಸುತ್ತಿದ್ದ ನನಗೆ ನನ್ನ ಪೂರ್ವಜನ್ಮ ಸುಕೃತವೋ ಎಂಬಂತೆ ಒಮ್ಮೆ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ ಸತ್ಸಂಗದ ಕಾರ್ಯಕ್ರಮದಲ್ಲಿ ಭಾಗವಹಿಸುವ ಸುಯೋಗ ದೊರಕಿತ್ತು. ಆ ಸತ್ಸಂಗದ ಕೇಂದ್ರ ಬಿಂದು ಪೂಜ್ಯ ಶ್ರೀ ಅನಂತಕುಮಾರ ಸ್ವಾಮೀಜಿಯವರ ವ್ಯಕ್ತಿತ್ವ ಅವರ ಹಿತನುಡಿಗಳು ನನ್ನನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. ಉದಾರಚರಿತರಾದ ಅವರಲ್ಲಿ ನಾನು ಮೊಟ್ಟಮೊದಲಿಗೆ ಕಂಡದ್ದು ಯಾವುದೇ ಹಮ್ಮು ಬಿಮ್ಮುಗಳಿಲ್ಲದೆ ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸುತ್ತಾ ಆತ್ಮೀಯರಾಗಿ ಬಿಡುತ್ತಿದ್ದರು. ಅವರ ಸಂಪರ್ಕ ನನ್ನ ಜೀವನದಲ್ಲಿ ಅದುವರೆಗೂ ಇದ್ದ ಯಾವುದೋ ಒಂದು ಶೂನ್ಯತೆಯನ್ನು ತುಂಬಿತು.

ಅವರ ಹಿತವಚನಗಳು ನನ್ನಲ್ಲಿನ ಆಧ್ಯಾತ್ಮ ಚಿಗುರೊಡೆಯಲು ಸಹಾಯವಾಯಿತು. ಆಧ್ಯಾತ್ಮ ಜೀವನ ನಡೆಸುವಲ್ಲಿ ಹೆಚ್ಚಿನ ಉತ್ಸಾಹ ಮತ್ತು ಸ್ಫೂರ್ತಿಯನ್ನು ಅವರ ಸಂಪರ್ಕ ನನಗೊದಗಿಸಿತು. ಅವರ ಸಾನಿಧ್ಯದಲ್ಲಿ

ಸತ್ಯರಾ ನುಡಿ ತೀರ್ಥ ನಿತ್ಯರಾ ನಡೆತೀರ್ಥ
ಉತ್ತಮರ ಸಂಗವದು ತೀರ್ಥ
ಹರಿವ ನೀರೆತ್ತಣದು ತೀರ್ಥ ಸರ್ವಜ್ಞ – ಎಂಬ ಸರ್ವಜ್ಞನ ಸತ್ಯತೆಯನ್ನು ಅನುಭವಿಸುವಂತಾಗುತಿತ್ತು.

ಅವರು ನನಗೆ ವಿಶೇಷವಾಗಿ, ಪೂಜ್ಯ ಸ್ವಾಮಿ ಯತೀಶ್ವರಾನಂದ ಜೀಯವರ ರಚಿತವಾದ" ಧ್ಯಾನ ಮತ್ತು ಆಧ್ಯಾತ್ಮಕ ಜೀವನ" ಎಂಬ ಗ್ರಂಥವನ್ನು ಅಧ್ಯಯನ ಮಾಡಲು ಹೇಳುತ್ತಿದ್ದರು. ಧ್ಯಾನ ದಿಂದ ಅಂತರಂಗಕ್ಕೆ ಸಂಸ್ಕಾರವೊದಗುವುದು ಮಾತ್ರವೇ ಅಲ್ಲದೆ ದೇಹ ಮನಸ್ಸುಗಳೂ ಉಲ್ಲಾಸವಾಗಿರುತ್ತವೆ ಎಂಬುದನ್ನು ಅರಿತೆ. ಕ್ರಮೇಣ ನನ್ನ ಮನಸ್ಸು ಅಂತರ್ಮುಖಿವಾಗಿ, ಜೀವನದಲ್ಲಿ ಸಾರ್ಥಕತೆಯನ್ನು ಸಾಧಿಸಬೇಕಾದರೆ ಆಧ್ಯಾತ್ಮವನ್ನೇ ಬಲವಾಗಿ ನಂಬಿ, ಸನ್ಯಾಸ ಜಿವನವನ್ನು ನಡೆಸಬೇಕೆಂಬ ಆಸೆ ಕುಡಿಯೊಡೆಯಿತು. ನಾನಿಂದು ಸ್ವಾಮಿ ವಿವೇಕಾನಂದ ರಿಂದ ಸ್ಥಾಪಿತವಾದ ಬೇಲೂರು ಮಠದ ರಾಮಕೃಷ್ಣ ಮಠದ ಸನ್ಯಾಸ ಜೀವನ ನಡೆಸುತ್ತಿದ್ದರೆ, ಇದರಲ್ಲಿ ಪೂಜ್ಯ ಶ್ರೀ ಅನಂತಕುಮಾರ ಸ್ವಾಮೀಜಿಯವರ ಮಾರ್ಗದರ್ಶನ ಪ್ರಭಾವಗಳೇ ಕಾರಣ ಎಂದು ಹೇಳಬಲ್ಲೆ.

ಶ್ರೀ ರಾಮಷ್ಣ ಮಠವನ್ನು ಸೇರಿ ಸನ್ಯಾಸಿಯಾದ ನಂತರವೂ ಕೂಡ ಪೂಜ್ಯರನ್ನು ಹಲವಾರು ಬಾರಿ ಭೇಟಿಯಾದಾಗಲೆಲ್ಲಾ ಆಧ್ಯಾತ್ಮಿಕ ಜೀವನದ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದವು.


ಮನುಷ್ಯನ ಇಷ್ಟೆಲ್ಲಾ ಹಾರಾಟ / ಹೋರಾಟದ ಹಿನ್ನೆಲೆ– ಸುಖ ಶಾಂತಿ ನೆಮ್ಮದಿಗಾಗಿ, ಅದು ನಮ್ಮಲ್ಲೇ ಇದೆ ಎಂಬ ಸನಾತನ ಸತ್ಯವನ್ನು ಸಾಧಿಸಿ ತೋರಿಸಿ ಅನುಸರಿಸಿ ಉಪದೇಶಿಸುತ್ತಿರುವುದು, ಧ್ಯಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿದ್ದು, ಸನ್ಮಾರ್ಗವನ್ನು ತೋರಿಸುತ್ತಿರುವುದು, ಈ ಇಳಿ ವಯಸ್ಸಿನಲ್ಲೂ ಅಷ್ಟೆಲ್ಲಾಕಾರ್ಯ ಚಟುವಟಿಕೆಗಳನ್ನೂ ನಿರ್ವಹಿಸುತ್ತಿದ್ದರೂ ನಿತ್ಯಾನುಷ್ಠಾನಗಳನ್ನು ಮಾಡಿಯೇ ಪೂಜ್ಯರು ಕೊಠಡಿಯಿಂದ ಹೊರಬರುವ ವಿಚಾರ ಅವರ ಸಂಪರ್ಕಕ್ಕೆ ಬಂದ ಎಲ್ಲರಿಗೂ ತಿಳಿದಿರುವ ಸಂಗತಿ.

ಇತ್ತೀಚೆಗೆ ಕೆಲವು ದಿನಗಳ ಹಿಂದೆ ಮೈಸೂರಿನ ನಮ್ಮ ಶ್ರೀ ರಾಮಕೃಷ್ಣ ವಿದ್ಯಾಶಾಲೆಗೆ ಪೂಜ್ಯರು ಭೇಟಿಯಾಗುತ್ತಾ ಅವರಿಗೆ ನಾನು ಸ್ವಾಮೀಜಿ ಸ್ವಲ್ಪ ಉಪಹಾರವನ್ನು ಸೇವಿಸಿ ಎಂದೆ. ಅದಕ್ಕೆ ಅವರು 'ನೀವೇನಾದರೂ ಕೊಡಬೇಕೆಂದಿದ್ದರೆ ಸ್ವಲ್ಪ ಆಧ್ಯಾತ್ಮಿಕ ಉಪಹಾರಕೊಡಿ' ಎಂದರು.

ಸ್ವಾಮಿ ವಿವೇಕಾನಂದರು ಹೇಳಿದಂತೆ 'ಈಗಿನ ಕಾಲದಲ್ಲಿ ಶೇಕಡಾ 99 ಜನಕ್ಕೆ ಆಧ್ಯಾತ್ಮಿಕ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನು ಕುರಿತು ಮಾತನಾಡುವುದು ಮತ್ತೂ ಕಷ್ಟ' ಎಂದಿದ್ದಾರೆ. ಆಧ್ಯಾತ್ಮಿಕ ಆದರ್ಶಗಳ ಸರಿಯಾದ ಹಿನ್ನೆಲೆ ತರಬೇತಿ ಇಲ್ಲದೆ ವ್ಯಕ್ತಿಯ ನಿಜವಾದ ಅಭ್ಯುದಯವಾಗಲಿ ಸಮಾಜದ ಕಲ್ಯಾಣವಾಗಲಿ ಸಾಧ್ಯವಾಗದು ಎಂಬುದನ್ನು ಮನಗಂಡು ಯಾವುದೇ ಸದ್ದುಗದ್ದಲ ವಿಲ್ಲದೆ ಮೌನವಾಗಿ ತಪ್ಪದೆ ನಿಯಮಿತವಾಗಿ ಸತ್ಸಂಗ ಕಾರ್ಯಕ್ರಮಗಳನ್ನು ಆಯೋಜಿಸಿ ನಡೆಸಿಕೊಂಡು ಬರುತ್ತಿರುವುದು ಪೂಜ್ಯರ ಅಂತಸ್ಸತ್ವಕ್ಕೆ ಸಾಕ್ಷಿಯಾಗಿದೆ.

ಮಂಡ್ಯ ಜಿಲ್ಲೆಯನ್ನು ಕರ್ಮಕ್ಷೇತ್ರವನ್ನಾಗಿ ಆಯ್ಕೆ ಮಾಡಿ ಕಾರ್ಯಕ್ಷೇತ್ರವನ್ನಾಗಿಸಿರುವುದು ಆ ಜನತೆಯ ಮಹಾ ಸೌಭಾಗ್ಯವೇ ಸರಿ.

ತ್ಯಾಗ ಮತ್ತು ಸೇವೆಯ ಆದರ್ಶವನ್ನು ಮೈಗೂಡಿಸಿಕೊಂಡು ಜೀವನವನ್ನು ಸಾರ್ಥಕಪಡಿಸಿ ಕೊಳ್ಳುತ್ತಿದ್ದು ಅಮೃತ ವರ್ಷದ ಹೊಸ್ತಿನಲ್ಲಿರುವ ಶ್ರೀಮತ್ ಶ್ರೀ ಶ್ರೀಅನಂತಕುಮಾರ ಸ್ವಾಮೀಜೀಯವರು ಯಾವುದೇ ಮಠ–ಮಾನ್ಯಗಳ ಆಧಾರವಿಲ್ಲದೇ. "ಅಭಿನವ ಭಾರತಿ" ಎಂಬ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪ್ರಾರ್ಥನೆ ಮತ್ತು ಆಧ್ಯಾತಿಕ ಚಟುವಟಿಕೆಗಳ ಮೂಲಕ ವಿದ್ಯಾದಾನ ಮತ್ತು ಜ್ಞಾನದಾನವನ್ನು ನೀಡುತ್ತಾ " ಎಲ್ಲಾ ಶಕ್ತಿಯು ನಿಮ್ಮಲ್ಲಿ ಅಂತರ್ಗತವಾಗಿದೆ, ನೀವು ಏನನ್ನು ಬೇಕಾದರೂ ಮಾಡಬಹುದು " ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನು ಎಲ್ಲರಿಗೂ ಪಸರಿಸುತ್ತಿರುವ ಹಾಗೂ ಸಹಸ್ರಾರು ಸಾಧಕರಿಗೆದಾರಿ ದೀಪವಾಗಿದ್ದಾರೆ. ಅವರು ನಮ್ಮಿಂದ ದೇಹತ್ಯಾಗ ಮಾಡಿರಬಹುದು, ಆದರೆ ಅವರ ಆತ್ಮ ನಮಗೆಲ್ಲರಿಗೂ ಬೆಳಕು, ಚೈತನ್ಯವನ್ನು ನೀಡುತ್ತಾ ಎಲ್ಲರ ಬದುಕಿಗೆ ಆಶಾಕಿರಣವಾಗಿದ್ದಾರೆ.



–ವಿಶ್ವ ವಿದಾನಂದರು
ರಾಮಕೃಷ್ಣ ಆಶ್ರಮ, ಮೈಸೂರು

# ಸಾಧನೆಯ ಮಲ್ಲಗಂಬ ಅಭಿನವ ಭಾರತಿ ವಿದ್ಯಾಕೇಂದ್ರ ಮಂಡ್ಯ



ಅಭಿನವ ಭಾರತಿ ವಿದ್ಯಾಕೇಂದ್ರ ಪ್ರೌಢಶಾಲೆಯನ್ನು 1982–83ನೇ ಸಾಲಿನಲ್ಲಿ ಸುಮಾರು ನಲವತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಪ್ರಾರಂಭಿಸಿ ಕನ್ನಡ ಮಾಧ್ಯಮವನ್ನು ತೆರೆಯಲಾಯಿತು. ಈ ಸಂಸ್ಥೆಯು ಇಂದು ಬೃಹತ್ ಎತ್ತರಕ್ಕೆ ಬೆಳೆದು ಹೆಮ್ಮರವಾಗಿ ನಿಂತಿದೆ. ಮಂಡ್ಯ ಜಿಲ್ಲೆಯ ಪ್ರಮುಖ ಶಾಲೆಗಳ ಮುಂಚೂಣಿಯಲ್ಲಿದೆ. ಇಂದು ಸಾವಿರಾರು ವಿದ್ಯಾರ್ಥಿಗಳು ಓದುತ್ತಿರುವುದನ್ನು ಹಾಗೂ ಸಾಧನೆಗೈದಿರುವುದನ್ನು ಕಾಣಬಹುದಾಗಿದೆ. ಶಿಕ್ಷಕ ಕುಟುಂಬಗಳನ್ನು ಸಿಬ್ಬಂದಿ ಕುಟುಂಬಗಳನ್ನು ಸಾಕಿ ಸಲಹುತ್ತಿದೆ. ಬಡ ವಿದ್ಯಾರ್ಥಿಗಳಿಗೆ ಆಶ್ರಯ ತಾಣವಾಗಿದೆ ಕಲಿಕೆಯಲ್ಲಿ ಆಸಕ್ತಿ ಉಳ್ಳ ಮಕ್ಕಳಿಗೆ ಅಕ್ಷಯ ಭಂಡಾರವಾಗಿ ಮುನ್ನಡೆಯುತ್ತಿದೆ.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸ್ವಾಮೀಜಿಯವರು ಅನುಸರಿಸುತ್ತಿದ್ದ ಶಿಕ್ಷಣ ಕ್ರಮದ ಬಗ್ಗೆ ತಿಳಿದ ಮಂಡ್ಯ ಜನತೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಮುಂದಾದರು. 1984ರಲ್ಲಿ ಅಭಿನವ ಭಾರತಿ ಶಾಲೆಯು ಸರ್ ಎಂವಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯೋತ್ಸವದಂದು ಮಂಡ್ಯ ಜನತೆಗೆ ಪ್ರಥಮ ಬಾರಿಗೆ ಮಲ್ಲಗಂಬ ಪ್ರದರ್ಶನ ಮಾಡಿತು. ಅಂದಿನಿಂದ ಮಂಡ್ಯ ಜಿಲ್ಲೆಯ ಸಮಸ್ತ ಜನರಲ್ಲಿ ಅಭಿನವ ಭಾರತಿ ಎಂದರೆ ಮಲ್ಲಗಂಬ ಎಂದೂ, ಮಲಗಂಬ ಎಂದರೆ ಅಭಿನವ ಭಾರತಿ ಎಂಬ ಭಾವನೆಯೂ ಎಲ್ಲರಲ್ಲಿಯೂ ಬೆಳೆಯತೊಡಗಿತು.

ಪ್ರಸಕ್ತ ವರ್ಷದಲ್ಲಿ ಅಂದರೆ 2019–20ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕಗಳಿಸಿದ ಕುಮಾರಿ ಸಿಂಚನ ಭಟ್. ಪಿ, ಅವರು ರಾಜ್ಯಕ್ಕೆ 5ನೇ ಸ್ಥಾನವನ್ನು ಜಿಲ್ಲೆಗೆ 3ನೇ ಸ್ಥಾನವನ್ನು, ತಾಲ್ಲೂಕಿಗೆ 1 ನೇ ಸ್ಥಾನವನ್ನು ಪಡೆದುಕೊಳ್ಳುವುದರ ಮೂಲಕ ಶಾಲೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ. ಕಲಿಕೆ ನಿರಂತರ ಎಂಬಂತೆ ಸಾಧನೆ ಎಂಬುದು ಅಭಿನವ ಭಾರತಿಗೆ ನಿರಂತರವಾಗಿದೆ ಎಂದರೆ ತಪ್ಪಾಗಲಾರದು. ಈ ವಿದ್ಯಾರ್ಥಿಯನ್ನು ಶಾಲೆಯ ಆಡಳಿತ ಮಂಡಳಿ ಹಾಗೂ ಸಾರ್ವಜನಿಕ ಶಿಕ್ಷಣ ಸಂಸ್ಥೆಯು ಸನ್ಮಾನಿಸಿ ಗೌರವಿಸಸಿದೆ.

"ಎಳೆಯ ತರು ದಿನದಿನವು ಹೊಸತಳಿರ ತಳೆವಂತೆ ತಿಳಿನೀರು ಚಿಲುಮೆಯಲಿ ನಿಲದುಕ್ಕುವಂತೆ ಎಳೆ ಮಕ್ಕಳೊಳು ತಿಳಿವು ಮೊಳೆತು ಬೆಳೆಯುವುದು ನೋಡು ಇಳೆಯೊಳಗದೊಂದು ಸೊಗ – ಮಂಕುತಿಮ್ಮ" ಎಂಬಂತೆ ಈ ಶಾಲೆಯು ಕೇವಲ ಪಠ್ಯಚಟುವಟಿಕೆಯಲ್ಲಿ ಮಾತ್ರವಲ್ಲದೇ ಪಠ್ಯೇತರ ಚಟುವಟಿಕೆಯಲ್ಲೂ ತನ್ನದೇಆದ ಸಾಧನೆಯನ್ನು ಮಾಡಿರುವುದನ್ನು ಮನಗಾಣ ಬಹುದಾಗಿದೆ. ಅಂದರೆ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ನಮ್ಮ ಶಾಲೆಯು ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಹೋಗಿರುವುದನ್ನು ಬಹಳ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಹಾಗೂ ನಮ್ಮ ಶಾಲೆಯು ಕ್ರೀಡಾ ಕ್ಷೇತ್ರದಲ್ಲಿಯೂ ಮಹತ್ವದ ಹೆಜ್ಜೆ ಹಾಕಿರುವುದನ್ನು ಕೂಡ ಸಹ ಸ್ಮರಿಸಬಹುದಾಗಿದೆ. ಅಂದರೆ ಬ್ಯಾಡ್ಮಿಂಟನ್, ಈಜು ಸ್ಪರ್ಧೆ, ಕ್ರಿಕೆಟ್, ಬಾಸ್ಕೆಟ್‌ಬಾಲ್, ಹ್ಯಾಂಡ್‌ಬಾಲ್‌ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ರಾಜ್ಯ ಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಹೋಗಿ ಸ್ಪರ್ಧಿಸಿ ನಮ್ಮ ಶಾಲೆಗೆ ಕೀರ್ತಿತಂದಿರುತ್ತಾರೆ.

ಎಲ್ಲಾ ತರಗತಿ ಕೊಠಡಿಗಳನ್ನು ಡಿಜಿಟಲ್ ತರಗತಿಗಳನ್ನಾಗಿ ಮಾಡಲಾಗಿದೆ.ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ಆಶಯದಂತೆ ಮಣಿಪಾಲ್ ಫೌಂಡೇಶನ್‌ನೊಂದಿಗೆ ಕೈ ಜೋಡಿಸಿ ಪ್ರತಿನಿತ್ಯ ಅಂದರೆ ಬೆಳಿಗ್ಗೆ 9 ಗಂಟೆ ಯಿಂದ ಹತ್ತುಗಂಟೆ ಯವರೆಗೆ ಹತ್ತನೇ ತರಗತಿವರೆಗೂ, ಹಾಗೂ ಸಂಜೆ 3–30 ಯಿಂದ 4–45 ವರೆಗೆ ಒಂಬತ್ತನೇ ತರಗತಿವರೆಗೂ ಪಾಠ ಪ್ರವಚನಗಳನ್ನು ಕೇಳಿಸುವುದರ ಮೂಲಕ ವಿದ್ಯಾರ್ಥಿಗಳ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಲಾಗಿದೆ. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ಶಾಲೆಯ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ನಡೆಸುವ ಸಲುವಾಗಿ 2016–17ರಲ್ಲಿ ಹೊಸದಾಗಿ ಅನಂತ ಸಭಾಂಗಣವನ್ನು ನಿರ್ಮಿಸಲಾಯಿತು. ಇದು ಸುಸಜ್ಜಿತವಾದ ಬೆಳಕನ್ನೊಳಗೊಂಡ ಸಭಾಂಗಣವಾಗಿದೆ.

ವೃಕ್ಷಕಲ್ಲ ವೃಕ್ಷದ ಫಲವು, ನದಿಯ ನೀರು ನದಿಗಲ್ಲ, ಸಂತನ ಬದುಕು ಸಂತನಿಗಲ್ಲ ಅದು ಲೋಕದ ಹಿತಕೆ ಎಂಬಂತೆ ಶಿವಮೂರ್ತಿ ಕೀಲಾರರವರ ಅಧ್ಯಕ್ಷತೆಯಲ್ಲಿ ದಿನಾಂಕ 22–01–21 ರಂದು ವಿಜ್ಞಾನದ ಪ್ರಯೋಗಾಲಯ ಹಾಗೂ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಮಂಡ್ಯ ಪ್ರೌಢಶಾಲಾ ಆವರಣದಲ್ಲಿ ಹೊಸ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸಲಾಯಿತು.

# ಅಭಿನವ ಭಾರತಿಯ ಚೈತನ್ಯದ ಚಿಲುಮೆ



ಶಿವಮೂರ್ತಿ ಕೀಲಾರ ಅವರು ಅಭಿನವ ಭಾರತಿ ಶಿಕ್ಷಣ ಸಂಸ್ಥೆಗಳಿಗೆ ಚೈತನ್ಯ ಚಿಲುಮೆ ಆಗಿದ್ದಾರೆ. ಸಮಾಜಮುಖಿ ಕಾರ್ಯಗಳ ಮೂಲಕ ಸಂಸ್ಥೆಯ ಹೆಸರನ್ನು ಬೆಳೆಸುತ್ತಿರುವ ಧೀಮಂತ ವ್ಯಕ್ತಿ. ಇವರಿಗೆ ಸ್ವಾಮೀಜಿ ಅವರ ಮೇಲೆ ಅಪಾರ ಭಕ್ತಿ, ಗೌರವ, ವಿಶ್ವಾಸ. ಸ್ವಾಮೀಜಿಯವರ ಕನಸನ್ನು ಸಾಕಾರಗೊಳಿಸುವಲ್ಲಿ ಸತತ ಪ್ರಯತ್ನಗಳ ಫಲವಾಗಿ ಅತ್ಯುತ್ತಮ ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ ಅಭಿನವ ಭಾರತಿ ಸಂಸ್ಥೆ. ಅಮೆರಿಕಾದ ಕನ್ನಡಿಗರಿಗೆ ಆಧ್ಯಾತ್ಮ ರಸದೌತಣವನ್ನು ಸ್ವಾಮೀಜಿ ಅವರ ಮೂಲಕ ನೀಡಿದ್ದಾರೆ.


ಮಂಡ್ಯದ ಪ್ರತಿಭೆಗಳನ್ನು ಅಮೇರಿಕಾ ದೇಶದ ನಾಸಾಗೆ ಪರಿಚಯಿಸಿದ ರೂವಾರಿಯಾದರು. ದಯೆ, ಪ್ರೀತಿ, ಕರುಣೆ, ಸೌಜನ್ಯ, ಅನ್ಯರನ್ನು ಕಂಡರೆ ಗೌರವ ಇರುವಂತಹ ಮನುಷ್ಯ ಜೀವನದಲ್ಲಿ ಸುಖವಾಗಿರುತ್ತಾನೆ. ಅಂತಹ ವ್ಯಕ್ತಿತ್ವದ, ಸದಾ ಹಸನ್ಮುಖಿ. ಶಿವಮೂರ್ತಿ ಕೀಲಾರ ಅವರು ಕವಿ ಕಾವ್ಯ ಹೇಳಿರುವಂತೆ ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು, ಗಳಿಸಿ ವೈಶ್ಯನಾಗು ದುಡಿದು ಶೂದ್ರನಾಗು ನಿನ್ನೊಲವಿದ್ದಂತಾಗು ಏನಾದರೂ ಆಗು ಮೊದಲು ಮಾನವನಾಗು ಎಂಬಂತೆ ಉದಾತ್ತ ಚಿಂತನೆಯ ಸರಳ ಜೀವನದ ವ್ಯಕ್ತಿತ್ವವುಳ್ಳ ಶಿವಮೂರ್ತಿ ರವರು ಇರುವುದು ಸಹ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವುದು ಅಭಿನವ ಭಾರತಿ ಸಂಸ್ಥೆಯ ಹೆಮ್ಮೆಯ ವಿಷಯವಾಗಿದೆ. ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಎಲ್ಲ ವರ್ಗದವರಿಗೂ ಆರೋಗ್ಯ ತಪಾಸಣೆ ಮಾಡಿಸಿ ಸಂಸ್ಥೆಯ ಎಲ್ಲರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತಹ ಉತ್ತಮ ವ್ಯಕ್ತಿತ್ವ. ಫಾರ್ಮಸಿ ಕಾಲೇಜು ಸ್ಥಾಪನೆ ಮಾಡಿ ಶಿಕ್ಷಣದ ಜತೆ ಉದ್ಯೋಗವನ್ನೂ ಕಲ್ಪಿಸಿಕೊಡುವಂತ ಧೀಮಂತ ವ್ಯಕ್ತಿತ್ವ ವುಳ್ಳ ವ್ಯಕ್ತಿ. ಸ್ವಾಮೀಜಿ ಅವರ ಶಿಷ್ಯರಾಗಿ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಮತ್ತು ಸಮಾಜಮುಖಿ ಕೆಲಸಗಳು ಹಾಗೂ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿ ಸ್ವಾಮೀಜಿಯ ಹೆಸರನ್ನು ಬಾನೆತ್ತರಕ್ಕೆ ಕೊಂಡೊಯ್ಯುವಲ್ಲಿ... 


ಸ್ವಾಮೀಜಿಯ ಹೆಸರನ್ನು ಬಾನೆತ್ತರಕ್ಕೆ ತೆಗೆದುಕೊಂಡು ಹೋಗುವಲ್ಲಿ ಶಿವಮೂರ್ತಿ ಅವರ ಶ್ರಮ ಅತ್ಯಮೂಲ್ಯವಾಗಿದೆ. ಮುಂದಿನ ಚರಿತ್ರೆಯಲ್ಲಿ ಸುವರ್ಣ ಅಕ್ಷರದಲ್ಲಿ ತೆರೆದಿರುವ ಕಾಲ ದೂರವಿಲ್ಲ.

ಶಿವಮೂರ್ತಿಯವರು ಸಕಾರಾತ್ಮಕ ಚಿಂತನಶೀಲ ವ್ಯಕ್ತಿಯಾಗಿದ್ದಾರೆ. ಅವರ ಪ್ರತಿಯೊಂದು ಕೆಲಸಗಳಲ್ಲೂ ಶ್ರದ್ಧೆ, ಸ್ವಾಮೀಜಿ ಅವರ ಮೇಲಿನ ಭಕ್ತಿ ಎದ್ದುಕಾಣುತ್ತದೆ. ಸ್ವಾಮೀಜಿಯ ಕಾಲವಾದ ನಂತರದ ದಿನಗಳನ್ನು ಯೋಚಿಸಲು ಸಾಧ್ಯವಾಗದ ದಿನಗಳಲ್ಲಿ ಅವಧೂತರ ರೀತಿ ಅವತರಿಸಿರುವ ಜಗನ್ಮಹಾವ್ಯಕ್ತಿ ಎಂದರೆ ತಪ್ಪಾಗಲಾರದು.

ಸ್ವಾಮೀಜಿ ಅವರ ಸ್ಮಾರಕ ನಿರ್ಮಾಣ ಮತ್ತು ಧ್ಯಾನ ಕೇಂದ್ರ ನಿರ್ಮಾಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರುವುದು ಅತ್ಯಂತ ಸೂಕ್ತವಾಗಿದೆ.

ಮನುಷ್ಯ ಎಷ್ಟು ವರ್ಷ ಬದುಕಿದ್ದ ಎನ್ನುವುದಕ್ಕಿಂತಲೂ ಬದುಕಿದ್ದ ಅವಧಿಯಲ್ಲಿ ಎಷ್ಟು ರಚನಾತ್ಮಕ ಸಾಧನೆಗಳನ್ನು ಮಾಡಿದ ಎಂಬುದು ಮುಖ್ಯ ಆಗಿದೆ. ಶಿವಮೂರ್ತಿ ರವರು ಅಭಿನವ ಭಾರತಿ ವಿದ್ಯಾ ಸಂಸ್ಥೆಯನ್ನು ಶಿಕ್ಷಕರಿಗೆ ನೆರಳು ವಿದ್ಯಾರ್ಥಿಗಳಿಗೆ ಜ್ಞಾನ ನೀಡುವ ಮಹಾ ದೇಗುಲವಾಗಿ ಮಾಡುವಲ್ಲಿ ನಿರಂತರ ಕಾರ್ಯಗಳನ್ನು ಮಾಡುತ್ತಿರುವ ಅದ್ಭುತವಾದ ಚೇತನ ಎಂದರೆ ತಪ್ಪಾಗಲಾರದು





– ಹೆಚ್ ಎಸ್ ಸುಮ,
ಎಸ್ ವಿ ವಿ ಪ್ರೌಢಶಾಲೆ ಹೊಳಲು

***

# ಔಷಧ ಲೋಕದ ಆಶಾಕಿರಣ ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ



ಅಭಿನವ ಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಇತ್ತೀಚೆಗೆ ಅಂದರೆ 2018 ರಲ್ಲಿ ಪ್ರಾರಂಭವಾದದ್ದೆ ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ. ಪೂಜ್ಯ ಶ್ರೀ ಅನಂತಕುಮಾರ ಸ್ವಾಮೀಜಿಯವರು ಅಭಿನವ ಭಾರತಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಮಂಡ್ಯ ನಗರ ಹಾಗೂ ಗ್ರಾಮೀಣ ಭಾಗಗಳಲ್ಲೂ ಕೂಡ ಶಾಲೆಗಳನ್ನು ತೆರೆದು ನರ್ಸರಿಯಿಂದ ಪದವಿಪೂರ್ವ ಶಿಕ್ಷಣದ ವರೆಗೆ ಸಾಮಾನ್ಯ ಹಾಗೂ ಮಧ್ಯಮ ವರ್ಗದ ಕುಟುಂಬದ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದೊಂದಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದ್ದರು. ಆದರೆ ಅವರ ಮನದ ಮೂಲೆಯಲ್ಲಿ ಬಹಳವಾದ ಹೆಬ್ಬಯಕೆಯೊಂದಿತ್ತು. ಅದೇನೆಂದರೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಕೋರ್ಸುಗಳನ್ನು ಪ್ರಾರಂಭಿಸ ಬೇಕೆಂಬುದು. ಆದರೆ, ಅದಕ್ಕೆ ಸಾಕಷ್ಟು ಪರಿಶ್ರಮ, ಮಾರ್ಗದರ್ಶನ ಮತ್ತು ಆಡಳಿತಾತ್ಮಕ ಅಡೆತಡೆಗಳನ್ನು ನಿವಾರಿಸುವ ಅವಶ್ಯಕತೆಯಿತ್ತು.

ಈ ಸಮಯದಲ್ಲಿ ಸ್ವಾಮೀಜಿಯವರು ವಯೋಸಹಜ ಆರೋಗ್ಯ ಸಮಸ್ಯೆಗಳನ್ನು ಎದುರಿಸ ಬೇಕಾಗಿ ಬಂದದ್ದರಿಂದ ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸುವ ಸಮರ್ಥ ಉತ್ತರಾಧಿಕಾರಿಯಾಗಿ ತಮ್ಮ ಸಂಸ್ಥೆಯ ಹಿರಿಯ ವಿದ್ಯಾರ್ಥಿ, ಪ್ರೀತಿಯ ಶಿಷ್ಯ, ಅಮೇರಿಕಾದಲ್ಲಿ ಉದ್ಯಮಿಯಾಗಿದ್ದ ಶ್ರೀ ಶಿವಮೂರ್ತಿ ಕೀಲಾರರವರ ಮನವೊಲಿಸಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳನ್ನಾಗಿ ನೇಮಿಸಿದರು.

ಶ್ರೀ ಶಿವಮೂರ್ತಿ ಕೀಲಾರರವರು ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳು ವೇಗವಾಗಿ, ಸರಾಗವಾಗಿ ಮತ್ತು ಸುಲಲಿತವಾಗಿ ನಡೆದುಕೊಂಡು ಹೋಗುವಂತಾಯಿತು.

ಸ್ವಾಮೀಜಿಯವರ ಮನದ ಮೂಲೆಯಲ್ಲಿದ್ದ ಉನ್ನತ ಶಿಕ್ಷಣ ಕೋರ್ಸುಗಳನ್ನು ಆರಂಭಿಸುವ ಆಸೆಯನ್ನು ಅರಿತ ಶ್ರೀ ಶಿವಮೂರ್ತಿ ಕೀಲಾರರವರು, ಸ್ವಾಮೀಜಿಯವರ ಆಸೆಯಂತೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಕೋರ್ಸುಗಳನ್ನು ಪ್ರಾರಂಭಿಸುವ ಸಂಕಲ್ಪವನ್ನು ತೊಟ್ಟು ಅದರಂತೆ ಕಾರ್ಯ ಪ್ರವೃತ್ತರಾದರು. 2018ರ ಶೈಕ್ಷಣಿಕ ವರ್ಷದಲ್ಲಿ ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿಯನ್ನು ತೆರೆದು ಡಿ ಫಾರ್ಮ ಕೋರ್ಸನ್ನು ಪ್ರಾರಂಭಿಸಿದರು. 60 ಸೀಟುಗಳ ದಾಖಲಾತಿ ಅನುಮತಿಯೊಂದಿಗೆ ಪ್ರಾರಂಭವಾದ ಕಾಲೇಜು ಪ್ರಥಮ ವರ್ಷದಲ್ಲೇ ಸಂಪೂರ್ಣ ಸೀಟುಗಳ ದಾಖಲಾತಿಯೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ. 2020ರ ಅಂತಿಮ ಪರೀಕ್ಷೆಯಲ್ಲಿ ಉತ್ತಮವಾದ ಫಲಿತಾಂಶ ಬಂದಿರುತ್ತದೆ.

ಕಾಲೇಜಿನಲ್ಲಿ ಶಿಕ್ಷಣದ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಹಲವಾರು ಉಚಿತ ವೈದ್ಯಕೀಯ ಶಿಬಿರಗಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸುವ ಮುಖೇನ ಬಡ ಹಾಗೂ ಮಧ್ಯಮ ವರ್ಗದ ಜನರ ಆಶಾಕಿರಣವಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸಿದ್ಧ ಫಾರ್ಮಸಿ ಕಂಪನಿಗಳಿಗೆ ಹಾಗೂ ಆಸ್ಪತ್ರೆಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅಲ್ಲಿನ ಪರಿಣಿತರಿಂದ ಹೆಚ್ಚಿನ ತರಬೇತಿ ಕೊಡಿಸಲಾಗುತ್ತಿದೆ. ಜೊತೆಗೆ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ಕೊಡಿಸುವ ಮೂಲಕ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಸಂಸ್ಥೆ ನೆರವಾಗಿ ನಿಲ್ಲುತ್ತಿದೆ. ಕಾಲೇಜಿನಲ್ಲಿ ಉತ್ತಮ ಹಾಗೂ ಸುಸಜ್ಜಿತ ಲ್ಯಾಬ್‌ಗಳು, ಗ್ರಂಥಾಲಯ, ಸೆಮಿನಾರ್ ಹಾಲ್ ಹಾಗೂ ಅನುಭವಿ ಬೋಧಕ ವರ್ಗವನ್ನು ಹೊಂದಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತಮವಾದ ವಾತಾವರಣವಿದೆ. 2020-21ನೇ ಸಾಲಿಗೆ ಬಿ ಫಾರ್ಮ ಪದವಿ ಕೋರ್ಸ್ ಅನ್ನು ಆರಂಭಿಸಿದ್ದು, ಸರ್ಕಾರ ನಿಗಧಿಪಡಿಸಿರುವ 60 ಸೀಟುಗಳು ಸಂಪೂರ್ಣವಾಗಿ ಭರ್ತಿಯಾಗಿರುತ್ತವೆ.

ಮಂಡ್ಯದ ಶಂಕರನಗರದಲ್ಲಿ ಅಭಿನವ ಭಾರತಿ ಕಾಲೇಜಿನ ಅನಂತ ಸಭಾಂಗಣದಲ್ಲಿ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ). ವತಿಯಿಂದ ಮಂಡ್ಯ ನಗರದಲ್ಲಿ ಪ್ರಥಮ ಬಾರಿಗೆ ಬಿ ಫಾರ್ಮಾಕೋರ್ಸ್‌ನ ಪ್ರಾರಂಭೋತ್ಸವದ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 25-01-2021 ನೇ ಸೋಮವಾರ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕರ್ನಾಟಕ ಸರ್ಕಾರದ ಮಾನ್ಯ ಉಪ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಡಾಕ್ಟರ್ ಸಿ. ಎನ್. ಅಶ್ವತ್ಥ್ ನಾರಾಯಣ್ ಅವರನ್ನು ಅಭಿನವ ಭಾರತಿ ಶಿಕ್ಷಣ ಟ್ರಸ್ಟ್‌ನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಅವರು ತಮ್ಮ ಭಾಷಣದಲ್ಲಿ ಮನುಕುಲಕ್ಕೆ ವೈರಿಯಾದ ಕೋವಿಡ್ ವೈರಸ್ಸನ್ನು ಹೊರದೂಡಿಸಲು ನಮ್ಮ ದೇಶದಲ್ಲಿ ಹಲವಾರು ಕಂಪನಿಗಳು ವ್ಯಾಕ್ಸಿನ್ ತಯಾರಿಕೆಯಲ್ಲಿ ನಿರತವಾಗಿದೆ. ಅವುಗಳಲ್ಲಿ ಎರಡು ಕಂಪನಿಗಳು ಸಫಲವಾಗಿರುವುದು ನಮ್ಮ ದೇಶದ ಘನತೆಯನ್ನು ಎತ್ತಿ ಹಿಡಿದಿವೆ ಇನ್ನೂ ಕೆಲವೇ ದಿನಗಳು ನಾಲ್ಕೈದು ಕಂಪನಿಗಳು ವ್ಯಾಕ್ಸಿನ್ ತಯಾರಿಸಲಿವೆ ಇದರಿಂದ ಕರೋನವನ್ನು ಹೋಗಲಾಡಿಸಲು ಸಾಧ್ಯವಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣವನ್ನು ಪಡೆಯುವುದರಿಂದ ಸಮಾಜದಲ್ಲಿ ಕಂಡುಬರುವ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಇದರಿಂದ ಭಾರತ ವಿಶ್ವದಲ್ಲೇ ಮಾದರಿ ರಾಷ್ಟವಾಗಲು ಸಾಧ್ಯ. ಫಾರ್ಮಸ್ಯೂಟಿಕಲ್ ಕ್ಷೇತ್ರದಲ್ಲಿ ಕೋಟ್ಯಂತ ರೂಪಾಯಿ ವಹಿವಾಟು ನಡೆಯುತ್ತಿದೆ ಭಾರತವು ವಿಶ್ವಕ್ಕೆ ಔಷಧಿ ಸರಬರಾಜು ಮಾಡುವ ರಾಷ್ಟವಾಗಲಿದೆ. ಮುಂದಿನ ದಿನಗಳಲ್ಲಿ ಡಿಎನ್ ಎ ಆಧಾರಿತ ಚಿಕಿತ್ಸೆ ಕೊಡುವ ವ್ಯವಸ್ಥೆ ಬರಲಿದೆ ಆಗ ಔಷಧಿಗಳನ್ನು ಲಸಿಕೆಗಳನ್ನು ಸಾಮೂಹಿಕವಾಗಿ ತಯಾರಿಸಬಹುದು. ಆಗ ಔಷಧ ಕಂಪನಿಗಳು ಅಗಾಧ ಪ್ರಮಾಣದಲ್ಲಿ ಔಷಧಗಳನ್ನು ತಯಾರಿಸಬೇಕಾಗುತ್ತದೆ. ಆಗ ಈ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಾಗಿ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಅಂದಿನ ದಿನಗಳಲ್ಲಿ API (Active pharmaceutical ingredient) ಅಂದರೆ ಸಕ್ರಿಯಔಷಧೀಯ ಘಟಕಾಂಶಕೂಡ ನಮ್ಮ ದೇಶದಲ್ಲಿರುತ್ತದೆ. ಇದಕ್ಕಾಗಿ ಇತರ ದೇಶಗಳನ್ನು ಅವಲಂಬಿಸದೆ ಇರಲು ವೇಗಗತಿಯಲ್ಲಿ ಸಂಶೋಧನೆಗಳು ಅವಿಷ್ಕಾರಗಳು ನಡೆಯುತ್ತಿವೆ. ಈ ವ್ಯವಸ್ಥೆಯು ನಮ್ಮದೇಶದಲ್ಲಿ ಶೀಘ್ರವಾಗಿ ಬರಲಿ ಎಂದು ಹಾರೈಸಿದರು.

ರಾಜೀವ್‌ಗಾಂಧಿ . ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾನಿಲಯ ಇದರ ಮಾನ್ಯ ಉಪ ಕುಲಪತಿಗಳಾದ ಶ್ರೀಮಾನ್ ಡಾ ಎಸ್ ಸಚ್ಚಿದಾನಂದರವರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿಶೇಷ ಆಹ್ವಾನಿತರಾಗಿ ಆಗಮಿಸಿದ ಶ್ರೀ ಸಚ್ಚಿದಾನಂದರವರು ತಮ್ಮ ಭಾಷಣದಲ್ಲಿ ಫಾರ್ಮಸಿ ಬಗ್ಗೆ ಮಾತನಾಡಲು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ, ಎದೆಯುಬ್ಬಿ ಬರುತ್ತದೆ ಎಂದು ಫಾರ್ಮಸಿ ಕ್ಷೇತ್ರದ ಬಗ್ಗೆ ಇರುವ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಕಾಯಿಲೆಗಳನ್ನು ವಾಸಿಮಾಡುವ ಗುಳಿಗೆಗಳ ಬಗ್ಗೆ ನಿರ್ಲಕ್ಷ್ಯ ಬೇಡ ಸತತವಾಗಿ ಹತ್ತರಿಂದ ಹದಿನೈದು ವರ್ಷಗಳ ಕಾಲ ಹಲವಾರು ವಿಜ್ಞಾನಿಗಳು ಸಂಶೋಧನೆ ಮಾಡಿ ನಂತರ ಗುಳಿಗೆಗಳನ್ನು ತಯಾರಿಸಲಾಗುತ್ತದೆ. ಮೊದಲನೇ ಹಂತದಲ್ಲಿ ಸಾವಿರದಷ್ಟು ಸಂಭವನೀಯ ರಾಸಾಯನಿಕಗಳನ್ನು ಆಯ್ಕೆ ಮಾಡಲಾಗುತ್ತದೆ. ಅವುಗಳ ಮೇಲೆ ನಿರಂತರ ಪ್ರಯೋಗಗಳನ್ನು ನಡೆಸಿ ನಂತರ ಅವುಗಳಲ್ಲಿ ಸುಮಾರು ನೂರರಷ್ಟು ರಾಸಾಯನಿಕಗಳನ್ನು ನಂತರದ ಪ್ರಯೋಗಗಳಿಗೆ ಆಯ್ಕೆ ಮಾಡಲಾಗುತ್ತದೆ. ನಂತರ ಅತ್ಯಂತ ವಿಶ್ವಾಸನೀಯ ಹತ್ತು ರಾಸಾಯನಿಕ ಆಯ್ಕೆ ಮಾಡಿ ಅವುಗಳ ಮೇಲೆ ಹಲವಾರು ಪ್ರಯೋಗಗಳನ್ನು ನಡೆಸಿ ಒಂದು ಕಾಯಿಲೆಗೆ ನಿರ್ದಿಷ್ಟ ಔಷಧಿಯನ್ನು ಕಂಡು ಹಿಡಿಯಲಾಗುವುದು. ಆನಂತರ ಮೊದಲು ಪ್ರಾಣಿಗಳ ಮೇಲೆ ಆ ಔಷಧಿಗಳನ್ನು ಪ್ರಯೋಗಿಸಿ ಅದರ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತದೆ. ನಂತರ ವಿವಿಧ ಹಂತಗಳಲ್ಲಿ ಮಾನವನ ಮೇಲೆ ಆ ಔಷಧಿಯನ್ನು ಪ್ರಯೋಗಿಸಿ ಅದರ ಪರಿಣಾಮ ಮತ್ತು ಅಡ್ಡ ಪರಿಣಾಮಗಳನ್ನು ಅಧ್ಯಯನ ಮಾಡಲಾಗುತ್ತದೆ. ಎಲ್ಲ ಪರೀಕ್ಷೆಗಳನ್ನೂ ಯಶಸ್ವಿಯಾಗಿ ಪೂರೈಸಿದ ಔಷಧಿ ಮಾರುಕಟ್ಟೆಗೆ ಬರುತ್ತದೆ. ಕೊರೋನದಂತಹ ಹೊಸ ಸಾಂಕ್ರಮಿಕ ರೋಗಗಳು ಬಂದಾಗ ಔಷಧಿ ಕಂಡು ಹಿಡಿಯುವುದಕ್ಕಿಂತ ಮೊದಲು ಬೇರೆ ಸಾಂಕ್ರಾಮಿಕ ರೋಗಗಳಿಗೆ ಕೊಡುವ ಔಷಧಿಯನ್ನು ಕೊಟ್ಟು ನೋಡಲಾಗುತ್ತದೆ. ನಂತರ ಅದಕ್ಕೆ ನಿರ್ದಿಷ್ಟ ಔಷಧಿಯನ್ನು ಕಂಡು ಹಿಡಿಯಲಾಗುತ್ತದೆ ನಮ್ಮ ವಿಶ್ವ ವಿದ್ಯಾನಿಲಯದಲ್ಲಿ ಆಯುರ್ವೇದ, ಯೂನಾನಿ, ಫಿಜಿಯೋಥೆರಪಿ ಅಂತಹ ನೂರಾರು ಕೋರ್ಸ್‌ಗಳಿವೆ. ನೀಟ್ ಪರೀಕ್ಷೆ ಬರೆದು ಅದರಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಈ ಕೋರ್ಸುಗಳನ್ನು ಅಭ್ಯಾಸ ಮಾಡಿದರೆ ಉತ್ತಮ ಭವಿಷ್ಯವಿದೆ. ಮಂಡ್ಯದಲ್ಲೆ ಮೊದಲ ಬಾರಿಗೆ ಬಿ ಫಾರ್ಮಾ ತಂದಿರುವುದಕ್ಕೆ ಸಂಸ್ಥೆಯ ಪದಾಧಿಕಾರಿಗಳಿಗೆ ಮತ್ತು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಿವಮೂರ್ತಿ ಕೀಲಾರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಬಿ. ಫಾರ್ಮಾ ಅಧ್ಯಯನ ಮಾಡುವುದರಿಂದ ಉದ್ಯೋಗಾವಕಾಶಗಳ ವ್ಯಾಪ್ತಿಯನ್ನು ವಿವರಿಸಿದರು. ಫಾರ್ಮಸಿ ಕ್ಷೇತ್ರದಲ್ಲಿ ನಡೆಯುತ್ತಿರುವ ಶೀಘ್ರಗತಿ ಬೆಳವಣಿಗೆ ಯಿಂದ ಫಾರ್ಮಸಿ ಕೋರ್ಸುಗಳನ್ನು ಅಭ್ಯಾಸ ಮಾಡುವುದರಿಂದ ಉದ್ಯೋಗ ದೊರೆಯುವುದು ಖಚಿತ ಎಂದು ತಿಳಿಸಿದರು. ಈ ಸಂಸ್ಥೆಗೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದಿಂದ ಎಲ್ಲ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ ಟಿ ಶ್ರೀಕಂಠೇಗೌಡರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಶ್ರೀಯುತ ಶ್ರೀಕಂಠೇಗೌಡರು ಮಂಡ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ ಔಷಧ ವಿಜ್ಞಾನ ಕಾಲೇಜು ಆರಂಭಿಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಖಾಯಿಲೆಗಳಿಂದ ಯಾವ ಮನುಷ್ಯನೂ ಹೊರತಾಗಿಲ್ಲ ಎಂದು ತಿಳಿಸುತ್ತಾ ಔಷಧ ವಿಜ್ಞಾನದ ಪ್ರಾಮುಖ್ಯತೆಯನ್ನು ತಿಳಿಸಿದರು. ಜಿಲ್ಲಾ ಕೇಂದ್ರದಲ್ಲಿ ಬಿ ಫಾರ್ಮದಂತಹ ಅತ್ಯುತ್ತಮ ಕೋರ್ಸ್ ಅನ್ನುತಂದು ಮಂಡ್ಯ ಜನತೆಗೆ ಉಪಯೋಗವಾಗುವ ಕೆಲಸ ಮಾಡಿದ್ದಾರೆ ಎಂದು ಶಿವಮೂರ್ತಿ ಕೀಲಾರ ಅವರನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಮಂಡ್ಯಜಿಲ್ಲಾ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಉಮೇಶ್‌ರವರು ಅಥಿತಿಗಳಾಗಿ ಭಾಗವಹಿಸಿದ್ದರು. ಅಭಿನವ ಭಾರತಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀಯುತ ಶಿವಮೂರ್ತಿಕೀಲಾರಾರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಇನ್ನೂ ಹಲವಾರು ಕೋರ್ಸುಗಳನ್ನು ಪ್ರಾರಂಭ ಮಾಡುವ ಉದ್ದೇಶವನ್ನು ಸಂಸ್ಥೆ ಹೊಂದಿದ್ದು ಅದಕ್ಕೆ ಅಗತ್ಯ ಸಿದ್ಧತೆಗಳನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರರವರ ಮಾರ್ಗದರ್ಶನದಲ್ಲಿ ಮಾಡಿಕೊಳ್ಳಲಾಗುತ್ತಿದೆ.



– ವಿಜಯ್ ಕುಮಾರ್
ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ

# ಸಂಸ್ಕೃತಿ, ಸಂಸ್ಕಾರದ ಉಳಿವಿಗೆ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್







ಆಧ್ಯಾತ್ಮಿಕ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ನಡೆಸುವ ಸದುದ್ದೇಶದಿಂದ ಹಾಗೂ ಸಂಸ್ಕಾರಗಳನ್ನು, ಮಾನವೀಯ ಮೌಲ್ಯಗಳನ್ನು ಜನತೆಯಲ್ಲಿ ಬಿತ್ತುವ ಮಹದಾಕಾಂಕ್ಷೆಯನ್ನು ಹೊಂದಿ ಸ್ಥಾಪನೆಯಾದದ್ದೆ 'ಶ್ರೀವೆಂಕಟೇಶ್ವರಚಾರಿಟಬಲ್ ಟ್ರಸ್ಟ್, ತನ್ನದೇ ಆದ ಪ್ರಮುಖ ಉದ್ದೇಶಗಳನ್ನು ಇಟ್ಟುಕೊಂಡು ಹೊಸ ಪಥದತ್ತ ಸಾಗುತ್ತಿರುವ ಟ್ರಸ್ಟ್ ಇದಾಗಿದೆ.ಇದರ ಪ್ರಮುಖ ಉದ್ದೇಶಗಳೆಂದರೆ ..

1. ಧ್ಯಾನ, ಪ್ರಾಣಾಯಾಮ ಮತ್ತು ಯೋಗ ತರಗತಿಗಳನ್ನು ಯಾವುದೇ ಬೇಧ-ಭಾವವಿಲ್ಲದೆ ನಗರದಾದ್ಯಂತ, ನಾಡಿನಾದ್ಯಂತ ಹಾಗೂ ಪ್ರಪಂಚದಾದ್ಯಂತ ನಡೆಸುವ ಹೆಬ್ಬಯಕೆಯನ್ನು ಹೊಂದಿದೆ.

2. ಪ್ರತೀ ವಾರ ಭಜನೆಗಳನ್ನು, ಸತ್ಸಂಗಗಳನ್ನು ಮಾಡುವುದರ ಜೊತೆಗೆ ಧ್ಯಾನ ಹಾಗೂ ಪ್ರಾಣಾಯಾಮವನ್ನು ನಡೆಸುವುದರ ಮೂಲಕ ಜನರನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರನ್ನಾಗಿಸುವುದು ಇದರ ಉದ್ದೇಶವಾಗಿದೆ.

3. ಏಕೀಕರಣದ ಹಿತದೃಷ್ಟಿಯಿಂದ ಸಮಾಜದಲ್ಲಿ ರಾಷ್ಟ್ರೀಯ ಮನೋಭಾವ ಮತ್ತು ಐಕ್ಯತೆಯನ್ನು ಬೆಳೆಸಲು, ನಮ್ಮ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ತತ್ವಗಳನ್ನು ಪ್ರಚಾರ ಮಾಡಿಎಲ್ಲಾ ನಾಗರಿಕರಲ್ಲಿ ಅರಿವು ಮೂಡಿಸುವ ಉದ್ದೇಶವನ್ನು ಹೊಂದಿದೆ.

4. ನಮ್ಮ ಪ್ರಾಚೀನ ಸಂಸ್ಕೃತಿ ಪರಂಪರೆಯ ಶಿಕ್ಷಣ ಮತ್ತು ಬೋಧನೆಗಳನ್ನು ಜನರಲ್ಲಿ ಉತ್ತೇಜಿಸಲು ವಿವಿಧ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಕಾರಿ ಆಗುವಂತೆ ಗ್ರಂಥಾಲಯಗಳನ್ನು ಮತ್ತು ವಾಚನಾಲಯವನ್ನು ಪ್ರಾರಂಭಿಸುವ ಉದ್ದೇಶ ಹೊಂದಿದೆ.

5. ಯಾವುದೇ ರೀತಿಯ ಜಾತಿ, ಕುಲ, ಮತ, ಧರ್ಮ ಹಾಗೂ ಸಮುದಾಯದ ತಾರತಮ್ಯವಿಲ್ಲದೆ ಧಾರ್ಮಿಕ ಸ್ಥಳಕ್ಕೆ ಬರುವಎಲ್ಲಾ ಯಾತ್ರಾರ್ಥಿಗಳಿಗೆ ದಾಸೋಹ ವ್ಯವಸ್ಥೆಯನ್ನು' ಮಾಡುವುದರ ಮೂಲಕ ಪ್ರತಿವರ್ಷ' ಸರ್ವಧರ್ಮ ಸಮ್ಮೇಳನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಇದರ ಉದ್ದೇಶವಾಗಿದೆ.

6. ವಯಸ್ಸಾದ ವೃದ್ಧರ ಆರೈಕೆಗಾಗಿ ವೃದ್ಧಾಶ್ರಮವನ್ನು ಮತ್ತು ಅನಾಥರಾದವರಿಗೆ ಅನಾಥಾಶ್ರಮವನ್ನು ಪ್ರಾರಂಭಿಸುವ ಗುರಿಯನ್ನು ಸಹ ಹೊಂದಿದೆ.

7. ಬಡ ವಿದ್ಯಾರ್ಥಿಗಳಿಗೆ ಅನುಕೂಲ ಹಾಗೂ ಸಹಾಯವಾಗುವಂತೆ ಅವರಿಗೆ ಉಚಿತ ಶಿಕ್ಷಣ ಮತ್ತು ವಸತಿಗಳನ್ನು (ಬೋರ್ಡಿಂಗ್) ನೀಡಿ ಅವರ ಸಾಧನೆಗೆ ಉತ್ತೇಜನ ನೀಡುವುದಾಗಿದೆ ಹಾಗೂ ಸಾಮಾನ್ಯ ವಿದ್ಯಾರ್ಥಿಗಳಿಗೆ 'ಯೋಗ' ತರಬೇತಿಗಾಗಿ ಯೋಗ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ.

8. ಸಾಮಾಜಿಕ ಕಳಕಳಿಯನ್ನು ಹೊತ್ತು ಸಾಗುತ್ತಿರುವ ಈ ಟ್ರಸ್ಟ್, ಸಾಮಾನ್ಯ ಜನರಿಗೆ ಆರೋಗ್ಯವನ್ನು ಕಾಪಾಡಲು ಮೊಬೈಲ್ ಆರೋಗ್ಯ ಘಟಕಗಳನ್ನು ಹಾಗೂ ಕಡಿಮೆ ಬೆಲೆಯಲ್ಲಿ ಅವರಿಗೆ ಮೆಡಿಷನ್ ಸಿಗುವಂತೆ ಮೆಡಿಕಲ್ಸ್ಅನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ.

9. ಕಾಮಧೇನು ಎಂದು ಭಾವಿಸಿ ಪೂಜಿಸಲ್ಪಡುವ ಹಸುಗಳನ್ನು ಮತ್ತು ಎತ್ತುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಗೋಶಾಲೆಯನ್ನು ಸ್ಥಾಪಿಸುವುದು ಹಾಗೂ ಉಚಿತ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಾಪಿಸುವುದು ಇದರ ಪರಮಗುರಿಯಾಗಿದೆ.



– ಕೃಷ್ಣಾಚಾರ್
ಅಭಿನವ ಭಾರತಿ ಪ್ರೌಢಶಾಲೆ,
ಮಂಡ್ಯ.

# ಆಧ್ಯಾತ್ಮಿಕ ವಿಚಾರ ದರ್ಶನ




ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ (ರಿ) ಮಂಡ್ಯ, ಈ ಸಂಸ್ಥೆಯ ವತಿಯಿಂದ ದಿನಾಂಕ 1-1-2021ನೇ ಶುಕ್ರವಾರದಂದು ಮಂಡ್ಯದ ಅಭಿನವ ಭಾರತಿ ಕಾಲೇಜಿನ ಸಭಾಂಗಣದಲ್ಲಿ "ಆಧ್ಯಾತ್ಮಿಕ ವಿಚಾರ ದರ್ಶನ" ಕಾರ್ಯಕ್ರಮ ನಡೆಯಿತು.

ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ ಮತ್ತು ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕರಾದ ಸ್ವರ್ಗಸ್ಥ ಪೂಜ್ಯ ಶ್ರೀ ಶ್ರೀಅನಂತಕುಮಾರ ಸ್ವಾಮೀಜಿ ಅವರ ದಿವ್ಯ ಆಶೀರ್ವಾದದೊಂದಿಗೆ ಅಭಿನವ ಭಾರತಿ ಪ್ರಾಥಮಿಕ ಶಾಲಾ ಶಿಕ್ಷಕಿಯರ ದೇವತಾ ಪ್ರಾರ್ಥನೆ ಯೊಂದಿಗೆ ಕಾರ್ಯಕ್ರಮ ಚಾಲನೆಗೊಂಡಿತು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನು ಸ್ವಾಗತಿಸಿದ ಶ್ರೀ ವೆಂಕಟೇಶ್ವರ ವಿದ್ಯಾನಿಕೇತನದ ಆಡಳಿತ ಅಧಿಕಾರಿಗಳಾಗಿರುವ ಶ್ರೀ ಜಗನ್ನಾಥರವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಪರಮಪೂಜ್ಯ ಶ್ರೀ ಶ್ರೀಅನಂತಕುಮಾರ ಸ್ವಾಮೀಜಿ ಅವರು ಅಭಿನವ ಭಾರತಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅದ್ಭುತವಾಗಿ ಬೆಳೆಸಿದ ರೀತಿಯನ್ನು ಹಂತ ಹಂತವಾಗಿ ವಿವರಿಸಿದರು. ಶ್ರೀ ಸ್ವಾಮೀಜಿ ಅವರ ಆಶಯಗಳಿಗೆ ಎಳ್ಳಷ್ಟೂ ಧಕ್ಕೆ ಬಾರದ ರೀತಿಯಲ್ಲಿ ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರ ಅವರನ್ನು ಸ್ವರ್ಗಸ್ಥ ಶ್ರೀ ಸ್ವಾಮೀಜಿಯವರು ಅಲ್ಲಿಂದಲೇ ಆಶೀರ್ವದಿಸಿ ಶಕ್ತಿ ತುಂಬುತ್ತಿದ್ದಾರೆ ಎಂದು ತಿಳಿಸಿದರು. ಸಂಸ್ಥೆಯ ಏಳಿಗೆಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಶ್ರೀ ಶಿವಮೂರ್ತಿ ಕೀಲಾರರವರು ಸ್ವಾಮೀಜಿಯವರು ಸ್ಥಾಪಿಸಿದ ಎಲ್ಲ ಅಂಗಸಂಸ್ಥೆಗಳ ನವೀಕರಣಕ್ಕಾಗಿ ಸುಮಾರು ಹಣವನ್ನು ಖರ್ಚು ಮಾಡಿ ಅವುಗಳಿಗೊಂದು ಹೊಸ ರೂಪ ನೀಡಿ ಎಲ್ಲಾ ಶಾಲಾ ಕಾಲೇಜುಗಳನ್ನು ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ಸಂಸ್ಥೆಯ ಮಕ್ಕಳು ವೈಜ್ಞಾನಿಕವಾಗಿ ಉನ್ನತ ಮಟ್ಟಕ್ಕೆ ಏರಬೇಕು ಎಂಬ ಮಹತ್ವಾಕಾಂಕ್ಷೆಗೆ ಪೂರಕವಾಗಿ, ವಿಜ್ಞಾನದಲ್ಲಿ ಅತ್ಯಂತ ಹೆಚ್ಚು ಆಸಕ್ತಿ ಇರುವ ಮಕ್ಕಳನ್ನು ಗುರುತಿಸಿ, ಅವರಎಲ್ಲಖರ್ಚನ್ನು ಭರಿಸಿ ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾಕ್ಕೆ ಕರೆದೊಯ್ದು ಅಲ್ಲಿನ ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿದರು ಎಂದು ತಿಳಿಸಿದರು.

ಸ್ವಾಮೀಜಿಯವರದ್ದು ಸಂಪೂರ್ಣವಾಗಿ ದೈವ ಸಮರ್ಪಿತ ಬದುಕಾಗಿತ್ತು. ಇದನ್ನು ಮನಗಂಡ ಶ್ರೀ ಶಿವಮೂರ್ತಿರವರು ಮಂಡ್ಯದ ಮೂಡಲದೊಡ್ಡಿ ಶಾಲೆಯ ಆವರಣದಲ್ಲಿ ಅತಿ ಸುಂದರವಾದ ದಕ್ಷಿಣಮೂರ್ತಿ ಸಹಿತ ಶ್ರೀ ಮಹಾ ಗಣಪತಿ ದೇವಸ್ಥಾನವನ್ನು ನಿರ್ಮಿಸಿ ಧನ್ಯರಾದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಲವಾರು ಗುಡಿ ಕೈಗಾರಿಕೆಗಳನ್ನು ಮೂಡಲದೊಡ್ಡಿಯಲ್ಲಿ ಸ್ಥಾಪಿಸಿ ಗ್ರಾಮೀಣ ಜನರಿಗೆ ಉದ್ಯೋಗ ದೊರೆಯುವಂತೆ ಮಾಡುವುದರ ಮೂಲಕ ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಮೇರಿಕಾದ ಪ್ರತಿಷ್ಠಿತ ಅಕ್ಕ ಕನ್ನಡ ಸಂಸ್ಥೆಯ ಅಧ್ಯಕ್ಷರಾಗಿದ್ದ ಶ್ರೀ ಶಿವಮೂರ್ತಿರವರು ದೇಶ ವಿದೇಶಗಳಲ್ಲಿ ಹಲವಾರು ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದರೂ, ಶ್ರೀ ಸ್ವಾಮೀಜಿಯವರು ಸ್ವರ್ಗಸ್ಥರಾದಾಗ ವಿಧಿವತ್ತಾಗಿ ಅವರ ಎಲ್ಲ ಪುಣ್ಯತಿಥಿ ಕಾರ್ಯಗಳನ್ನು ಪುತ್ರ ಸಮಾನರಾಗಿ ನಡೆಸಿಕೊಟ್ಟು ಆದರ್ಶ ಮೆರೆದಿದ್ದಾರೆ. ಶ್ರೀ ಸ್ವಾಮೀಜಿಯವರು ಸ್ಥಾಪಿಸಿರುವ ಧ್ಯಾನ ಕೇಂದ್ರದ ಎಲ್ಲಾ ಧಾರ್ಮಿಕ ಮತ್ತು ಆಧ್ಯಾತ್ಮಿಕ

ಚಟುವಟಿಕೆಗಳನ್ನು ಯಶಸ್ವಿಯಾಗಿ ಮುಂದುವರಿಸಿ ಕೊಂಡು ಹೋಗುತ್ತಿರುವುದಕ್ಕೆ ಇಂದಿನ "ಆಧ್ಯಾತ್ಮಿಕ ವಿಚಾರ ದರ್ಶನ" ಒಂದು ಉದಾಹರಣೆಯಾಗಿದೆ ಎಂದು ತಿಳಿಸಿದರು.

ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್.ಎ.ಚಿನ್ನೇಗೌಡರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಶ್ರೀ ಸ್ವಾಮೀಜಿ ಅವರಿಂದ ಸಮಾಜಕ್ಕೆ ದೊರೆತ ಅದ್ಭುತ ಸೇವೆಯನ್ನು ಸ್ಮರಿಸಿದರು. ನಲವತ್ತು ವರ್ಷಗಳ ಹಿಂದೆ ವಾರಾಣಸಿಯಿಂದ ಮಂಡ್ಯಕ್ಕೆ ಬಂದು ಮಂಡ್ಯದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಲು ಸಾಧ್ಯವಾಗಿದ್ದು ಪರಮಾತ್ಮನೊಂದಿಗಿದ್ದ ಬೆಸುಗೆ ಮತ್ತು ಸದಾ ಹಸನ್ಮುಖಿ ವ್ಯಕ್ತಿತ್ವ, ಶ್ರೀ ಸ್ವಾಮೀಜಿಯವರು ಅನಂತ ಸಾಧನೆಗಳನ್ನು ಕೊಂಡಾಡುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿದರು. ಅವರು ತಮ್ಮ ಭಾಷಣದಲ್ಲಿ ಅಭಿಮಾನಿ ಪತ್ರಿಕೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ ವೆಂಕಟೇಶ್ ಮತ್ತು ಕಣ್ವ ಡಯಾಗ್ನೋಸ್ಟಿಕ್ ಸರ್ವಿಸಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿ.ಎಂ.ವೆಂಕಟಪ್ಪ ಅವರ ಸಾಧನೆಯನ್ನು ಸ್ಮರಿಸುತ್ತಾ ಅವರುಗಳ ಸೇವೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡಲಾದ ಜೀವಮಾನ ಸಾಧನೆ ಪುರಸ್ಕಾರವನ್ನು ಸ್ವೀಕರಿಸಿ ಮಾತನಾಡಿದ 2020ರ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಶ್ರೀ ಟಿ.ವೆಂಕಟೇಶ್‌ರವರು ತಮ್ಮ ಭಾಷಣದಲ್ಲಿ ಶ್ರೀ ಅನಂತಕುಮಾರ ಸ್ವಾಮೀಜಿ ಅವರೊಂದಿಗಿದ್ದ ಅವರ ಒಡನಾಟವನ್ನು ಪರಿಚಯಿಸುತ್ತ ಶ್ರೀ ಸ್ವಾಮೀಜಿ ಅವರ ನಿಧನದಿಂದ ಒಂದು ನಿಷ್ಕಲ್ಮಶವಾಗಿ ಪ್ರೀತಿಸುವ ಜೀವವನ್ನು ಕಳೆದುಕೊಂಡಿರುವುದಕ್ಕೆ ಅಪಾರವಾದ ನೋವನ್ನು ವ್ಯಕ್ತಪಡಿಸಿದರು. ಎಲ್ಲವೂ ತಿಳಿದಿದ್ದು ಏನೂ ಗೊತ್ತಿಲ್ಲದವರಂತಿದ್ದ ಅದ್ಭುತ ಆಧ್ಯಾತ್ಮಿಕ ಶಕ್ತಿಯಾಗಿದ್ದ ಶ್ರೀ ಸ್ವಾಮೀಜಿಯವರ ಈ ಶಕ್ತಿಯೇ ಶ್ರೀ ಶಿವಮೂರ್ತಿ ಕೀಲಾರರವರಂತಹ ಒಬ್ಬ ಸಮರ್ಥ ವ್ಯಕ್ತಿಯನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಲು ಸಾಧ್ಯವಾಯಿತು. ಹಾಗೂ ಶ್ರೀ ಶಿವಮೂರ್ತಿ ರವರು ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಿರುವ ರೀತಿಗೆ ಆಶ್ಚರ್ಯ ಹಾಗೂ ಅಭಿಮಾನವನ್ನು ವ್ಯಕ್ತಪಡಿಸುತ್ತಾ ಸಂಸ್ಥೆಯ ಉನ್ನತಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿದರು.

ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕಾರವನ್ನು ಸ್ವೀಕರಿಸಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಡಾ. ಎಚ್ ಎಂ ವೆಂಕಟಪ್ಪನವರು ಸರ್ವರಿಗೂ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತಾ ಮಂಡ್ಯಕ್ಕೆ ಅವರನ್ನು ಕರೆಸಿರುವುದಕ್ಕೆ ಅಪಾರ ಸಂತಸ ವ್ಯಕ್ತಪಡಿಸಿದರು. ಇದಕ್ಕೆ ಕಾರಣ ಮಂಡ್ಯ ಅವರ ಒಂದು ಕಾಲದ ಕರ್ಮ ಭೂಮಿಯಾಗಿದ್ದಿದು. ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಹನ್ನೊಂದು ವರ್ಷಗಳ ಕಾಲ ವೈದ್ಯರಾಗಿ ಸೇವೆ ಸಲ್ಲಿಸಿದ್ದ ವೆಂಕಟಪ್ಪನವರು ಶ್ರೀ ಸ್ವಾಮೀಜಿಯವರೊಂದಿಗಿದ್ದ ತಮ್ಮ ಒಡನಾಟವನ್ನು ಸ್ಮರಿಸಿದರು. ಒಂದು ಸಮಾಜ ಸುಧಾರಣೆ ಆಗಬೇಕಾದರೆ ಶಿಕ್ಷಣ ಮತ್ತು ಆರೋಗ್ಯ ಮಹತ್ವದ ಪಾತ್ರವಹಿಸುತ್ತದೆ. ಶಿಕ್ಷಣದಲ್ಲಿ ಧರ್ಮ, ಸಂಸ್ಕಾರ, ಸಂಸ್ಕೃತಿಯನ್ನು ಕಲಿಸಿದರೆ ಒಳ್ಳೆಯ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ತಿಳಿಸಿದರು.ತಮ್ಮ ಜೀವನದ ಮೇಲೆ ಶಿಕ್ಷಕರ ಪ್ರಭಾವವನ್ನು ತಿಳಿಸುತ್ತಾ ಶಿಕ್ಷಕರಿಗೆ ವಿದ್ಯಾರ್ಥಿಗಳೇ ದೊಡ್ಡ ಆಸ್ತಿ ಎಂದು ಹೇಳಿದರು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಉತ್ತಮ ಆಸ್ತಿಯನ್ನಾಗಿ ಮಾಡಿ ದೇಶಕ್ಕೆ ಕೊಡುಗೆಯಾಗಿ ನೀಡಬೇಕೆಂದು ತಿಳಿಸಿದರು.


ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕಾರ ಸ್ವೀಕರಿಸಿದ ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದ ಗೌರವಾಧ್ಯಕ್ಷರಾದ, ಮಾತಿಗಿಂತ ಹೆಚ್ಚಾಗಿ ತಮ್ಮ ಒಳ್ಳೆಯ ಕೆಲಸಗಳಿಂದ ಮಂಡ್ಯ ಜನತೆಗೆ ಚಿರಪರಿಚಿತರಾದ ಶ್ರೀ ಬೆಳ್ಳೂರು ಶಿವರಾಮ್‌ರವರು ತಮ್ಮ ಚುಟುಕು ಭಾಷಣದಲ್ಲಿ ಶ್ರೀ ಸ್ವಾಮೀಜಿಯವರು ನಡೆದುಬಂದ ರೀತಿಯನ್ನು ಪರಿಚಯಿಸುತ್ತಾ, ಶ್ರೀ ಶಿವಮೂರ್ತಿ ಕೀಲಾರರವರಿಗೆ ಈ ಸಂಸ್ಥೆಯನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸುವ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿದರು.

ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಮಳವಳ್ಳಿಯ ಶ್ರೀ ಮಂಟೇಸ್ವಾಮಿ ಮಠ ಮತ್ತು ಶ್ರೀ ಕ್ಷೇತ್ರ ಕಪ್ಪಡಿ ಇಲ್ಲಿನ ಮಠಾಧೀಶರಾದ ಪರಮ ಪೂಜ್ಯ ಎಮ್ ಎಲ್ ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್ ಅವರು ತಮ್ಮ ಆಶೀರ್ವಾದ ವಚನದಲ್ಲಿ ಸ್ವರ್ಗಸ್ಥರಾದ ಶ್ರೀ ಅನಂತಕುಮಾರ ಸ್ವಾಮೀಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತ, ಅವರ ಜತೆ ಮಾತನಾಡುವ ಸೌಭಾಗ್ಯ ದೊರೆಯದಕ್ಕೆ ಅತ್ಯಂತ ಬೇಸರ ವ್ಯಕ್ತಪಡಿಸಿದರು. ಆದರೂ ಶ್ರೀ ಸ್ವಾಮೀಜಿಯವರ ಸಾಧನ ಕ್ಷೇತ್ರಕ್ಕೆ ಬಂದಿರೋದೆ ನನ್ನ ಭಾಗ್ಯವೆಂದು ತಿಳಿಸಿದರು. "ಆಧ್ಯಾತ್ಮಿಕ ವಿಚಾರ ದರ್ಶನದ" ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾ, ಜನರ ಸೇವೆಯೇ ಜನಾರ್ಧನನ ಸೇವೆ ಎಂದು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉದ್ಯೋಗ ಕಲ್ಪಿಸುತ್ತಿರುವುದೇ ಶ್ರೀ ಶಿವಮೂರ್ತಿ ಕೀಲಾರರವರ ಆಧ್ಯಾತ್ಮಿಕತೆ. ಅಮೇರಿಕಾದಲ್ಲಿ ಐಷಾರಾಮಿ ಜೀವನ ನಡೆಸಿಕೊಂಡು ಇರಬಹುದಾದ ಅವಕಾಶಗಳಿದ್ದರೂ ಶ್ರೀ ಸ್ವಾಮೀಜಿಯವರ ಆಶೀರ್ವಾದ ಪಡೆದು ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿರುವುದು ಒಂದು ಆಧ್ಯಾತ್ಮಿಕತೆಯೇ ಆಗಿದೆ. ಶ್ರೀ ಸ್ವಾಮೀಜಿಯವರು ತಮ್ಮ ಆಧ್ಯಾತ್ಮ ಶಕ್ತಿಯಿಂದ ಅಂದು ನೆಟ್ಟ ಸಸಿ (ಶಿವಮೂರ್ತಿ ಅವರು ಅಭಿನವ ಭಾರತಿ ವಿದ್ಯಾ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿ) ಇಂದು

ಹೆಮ್ಮರವಾಗಿ ಫಲ ನೀಡುತ್ತಿದೆಎಂದು ಶ್ರೀ ಶಿವಮೂರ್ತಿ ಅವರ ಕೈಂಕರ್ಯವನ್ನು ಅಭಿನಂದಿಸಿದರು.ದೇವಸ್ಥಾನಕ್ಕೆ ಹೋಗುವುದು ಒಂದು ಆಚರಣೆ ಆದರೆ ದೇವರು ದೇವಸ್ಥಾನದಲ್ಲಿಯೇ ಇದ್ದಾನೆ ಎಂಬುದು ಮೂಢನಂಬಿಕೆ. ನಮ್ಮ ಆಧ್ಯಾತ್ಮಿಕ ಅಡಿಪಾಯ ಆಚರಣೆಗೆ ಸೀಮಿತವಾದುದಲ್ಲ, ಅದು ವಿಚಾರದಲ್ಲಿದೆ. ಆಧ್ಯಾತ್ಮಿಕ ವಿಚಾರಗಳನ್ನು ಅನುಭವದಿಂದ ಪ್ರಾಪ್ತಿಸಿಕೊಂಡು ನಮ್ಮ ಬದುಕನ್ನು ಹಸನುಗೊಳಿಸಬೇಕಾಗಿದೆ ಎಂದು ತಿಳಿಸಿದರು. ಅಭಿನವ ಭಾರತಿ ಸಂಸ್ಥೆಯ ಕೀರ್ತಿ ಕೈಲಾಸದಷ್ಟು ಎತ್ತರಕ್ಕೆ ತಲುಪಲಿ ಎಂದು ಹಾರೈಸಿದರು.

ಶ್ರೀ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಹೊರಬರುತ್ತಿರುವ ಶ್ರೀ ವೈಕುಂಠ ವಾರ್ತಾ ಎಂಬ ಆಧ್ಯಾತ್ಮಿಕ ಪತ್ರಿಕೆಯ ನಿರ್ವಹಣ ಸಂಪಾದಕರಾಗಿ ಹಲವಾರು ವರ್ಷ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಶ್ರೀ ಕೊಕ್ಕಡ ವೆಂಕಟರಮಣ ಭಟ್‌ರವರನ್ನು ಈ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು. ಅಲ್ಲದೆ, ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ನವೀನ್ ಚಿಕ್ಕಮಂಡ್ಯ ಅವರನ್ನು ಪತ್ರಿಕಾರಂಗದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಸನ್ಮಾನಿಸಿ ಅಭಿನಂದಿಸಲಾಯಿತು.ಶ್ರೀ ಸ್ವಾಮೀಜಿಯವರ ಒಡನಾಡಿಯಾಗಿದ್ದು ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ವತಿಯಿಂದ ನಡೆಯುತ್ತಿದ್ದ ಭಜನಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ ಶ್ರೀ ಸ್ವಾಮೀಜಿಯವರ ಧಾರ್ಮಿಕ ಸೇವೆಯಲ್ಲಿ ಸದಾ ಬೆಂಗಾವಲಾಗಿದ್ದ ಶ್ರೀ ರವೀಶ್.ಎಸ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಮತ್ತು ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು. ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳಿಂದ ದೂರವಿರಲು ಇಚ್ಛಿಸುವ ಮಹನೀಯರುಗಳನ್ನು ನಮ್ಮ ಸಂಸ್ಥೆಗೆ ಕರೆಸಿಕೊಂಡು ಸನ್ಮಾನಿಸುವುದೇ ಸೌಭಾಗ್ಯ ಮತ್ತು ಅದೇ ನಮಗೆ ದೊರೆತ ದೊಡ್ಡ ಸನ್ಮಾನ ಎಂದು ತಿಳಿಸಿದರು.
ಸಿಹಿ ತಿಂಡಿ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



ವರದಿ
**ಚಿಕ್ಕ ನಂದನ.ಪಿ,**
ಸಹ ಶಿಕ್ಷಕರು
ಅಭಿನವ ಭಾರತಿ ವಿದ್ಯಾಕೇಂದ್ರ ಪ್ರೌಢಶಾಲೆ
ಮಂಡ್ಯ.

## ನೆಮ್ಮದಿಯ ಬದುಕಿಗಾಗಿ ಒಂದೆರಡು ಬುದ್ಧಿ- ಮಾತು

**ನಿಮಗೆ ಎಲ್ಲರೊಂದಿಗೆ ಸಂಬಂಧಗಳನ್ನು ಸುಮಧುರವಾಗಿ ಉಳಿಸಿಕೊಳ್ಳಬೇಕೆಂಬ ಆಸೆಯಿದೆಯೇ?**

1. ಒಬ್ಬರ ವಿಚಾರ ಇನ್ನೊಬ್ಬರ ಬಳಿ ಮಾತನಾಡಬೇಡಿ, ಅದರಲ್ಲೂ ನಕಾರಾತ್ಮಕ ಸಂಗತಿಗಳನ್ನು ಅವರ ಅನುಪಸ್ಥಿತಿಯಲ್ಲಿ ಇನ್ನೊಬ್ಬರೊಡನೆ ಚರ್ಚಿಸಲೇ ಬೇಡಿ.
2. ಸಮಸ್ಯೆಗಳಿದ್ದರೆ ನೇರವಾಗಿ ಪ್ರಶ್ನಿಸಿ ಸ್ಪಷ್ಟನೆ ಪಡೆಯಿರಿ, ನಂಬಿಕೆಗೆ ಯೋಗ್ಯರಲ್ಲದವರ ಬಳಿ ಅಸಮಾಧಾನ ತೋಡಿಕೊಳ್ಳಬೇಡಿ.
3. ಸ್ನೇಹಿತರ ಬಂಧುಗಳಿಂದ ಅತಿಯಾಗಿ ಏನನ್ನೂ ನಿರೀಕ್ಷಿಸಬೇಡಿ ಹಾಗೂ ಯಾರನ್ನು ಅತಿಯಾಗಿ ಅವಲಂಬಿಸಬೇಡಿ.
4. ಹಣಕಾಸಿನ ವ್ಯವಹಾರದ ವಿಚಾರದಲ್ಲಿ ಇಬ್ಬರಿಗೂ ಪಾರದರ್ಶಕತೆಯಿರಲಿ.
5. ಮೊದಲು ನಾನೇ ಏಕೆ ಸ್ಪಂದಿಸಬೇಕೆಂಬ ಅಹಂಕಾರ ಇಬ್ಬರಿಗೂ ಬೇಡ.
6. ರಾಜಿ ಸಂಧಾನ ಮತ್ತು ಮಾತುಕತೆಗೆ ಸದಾ ಸಿದ್ಧವಾಗಿರಿ.
7. ತಂದುಹಾಕುವವರ ಬಗ್ಗೆ ಎಚ್ಚರವಿರಲಿ, ಹೇಳಿದನ್ನೆಲ್ಲಾ ಕೇಳುವ ಹಿತ್ತಾಳೆ ಕಿವಿಯಾಗದಿರಿ, ಸ್ವಂತ ಬುದ್ಧಿ ಇರಲಿ.
8. ಎಷ್ಟೇ ಪ್ರೀತಿಇದ್ದರೂ ಸ್ನೇಹಿತರಲ್ಲಿ/ ಸಂಬಂಧದಲ್ಲಿ ಉಸಿರುಗಟ್ಟಿಸುವ ಪೊಸೆಸೀವ್ ನೆಸ್ ಬೇಡ.
9. ತೀರಾ ಹತ್ತಿರದವರಾದರೂ ಸರಿ ಅವರ ಖಾಸಗಿ ಸಂಗತಿಗಳ ಮೇಲೆ ತೀವ್ರ ನಿಗಾ ಇರಿಸಲು ಹೋಗಬೇಡಿ, ನಿಮ್ಮ ಅತಿಪ್ರೀತಿ ಮತ್ತು ಕಾಳಜಿ ಅವರ ಉಸಿರುಗಟ್ಟಿಸದಿರಲಿ.
10. ಗೆಳೆತನ ಅಥವಾ ಸಂಬಂಧ ನಿಮ್ಮನ್ನು ಉನ್ನತಿಗೇರಿಸುತ್ತಿರಲಿ ಬದಲಾಗಿ ಕೆಟ್ಟಚಟ ಅಥವಾ ಕೆಟ್ಟ ಹವ್ಯಾಸಗಳೆಡೆಗೆ ಸೆಳೆಯದಿರಲಿ.
11. ಸಮಾನ ಅಭಿರುಚಿಯ ಕೆಲಸಗಳನ್ನು ಹಾಕಿಕೊಳ್ಳಿ ಸಂಬಂಧ ಗಟ್ಟಿಯಾಗಿರುತ್ತದೆ. ಅವರವರ ಕೆಲಸದಲ್ಲಿ ಬ್ಯುಸಿಯಾದಾಗ ಅವರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದನ್ನು ಗೌರವಿಸಬೇಕು.
12. ಪರಸ್ಪರ ಎಷ್ಟೇ ಆತ್ಮೀಯರಾಗಿದ್ದರೂ ಆತ್ಮ ಗೌರವಕ್ಕೆ ಧಕ್ಕೆ ನೀಡಬೇಡಿ, ಒಂದು ವೇಳೆ ಆ ರೀತಿಆಗಿಬಿಟ್ಟರೆ ಮುಲಾಜಿಲ್ಲದೇ ಕ್ಷಮೆ ಕೇಳಿಬಿಡಿ ಮತ್ತು ಕ್ಷಮಿಸಿಬಿಡಿ.
13. ಎಷ್ಟೇ ಆತ್ಮೀಯರಾಗಿದ್ದರೂ ಅತಿಯಾದ ಸಲುಗೆ ಎಂದಿಗೂ ಸಲ್ಲದು. ಸಂಬಂಧದಲ್ಲಿ ಒಂದು ಮಿತಿ ರೇಖೆ ಇರಲಿ, ನೀವೂ ಅತಿಯಾದ ಸಲುಗೆ ನೀಡದಿರಿ.
14. ಆಗಾಗ ಮುಖತಃ ಭೇಟಿಗೆ ಮಾತುಕತೆಗೆ ಸಿಗುವ ಅವಕಾಶಗಳನ್ನು ಬಳಸಿಕೊಳ್ಳಿ, ಸಂದರ್ಭ ನೋಡಿ ಹೃದಯ ಬಿಚ್ಚಿ ಮಾತನಾಡಿ ಹಗುರವಾಗಿ.

# ಯೋಗ ಮತ್ತು ಆಧ್ಯಾತ್ಮಿಕತೆ



ಭಾರತೀಯ ಪ್ರಾಚೀನ ಹಾಗೂ ಪುರಾತನವಾದ ವಿದ್ಯೆ. ದೈಹಿಕ-ಮಾನಸಿಕ ಆಧ್ಯಾತ್ಮಿಕ ಸಾಮಾಜಿಕ ಸ್ವಾಸ್ಥತೆಯೇ ಯೋಗ.

ಯೋಗ ಎಂದರೆ ಆರಾಮವಾಗಿರುವುದು.

ಯೋಗದಲ್ಲಿ ಅಷ್ಟಾಂಗ ಯೋಗ ಅಂದರೆ 8 ವಿಧವಾಗಿ ಬದುಕುವುದು.

ಯಮ ನಿಯಮ - ಅಂತರಂಗಶುದ್ಧಿ ಮತ್ತು ಬಹಿರಂಗಶುದ್ಧಿ

ಆಸನ - ದೇಹಶುದ್ದಿ

ಪ್ರಾಣಯಾಮ- ಚೈತನ್ಯ ಶುದ್ಧಿ

ಪ್ರತ್ಯಾಹಾರ - ಇಂದ್ರಿಯಗಳ ಶುದ್ಧಿ, ತನಗೆ ಬೇಡದಿರುವುದನ್ನು ಬಿಡುವುದು.

ಧಾರಣೆ - ತನಗೆ ಬೇಕಾಗಿರುವುದು ಗುರುತಿಸುವುದು ಹಾಗೂ ಉಪಯೋಗಿಸುವುದು.

ಧ್ಯಾನ - ತನಗೆ ಇರುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಹಾಗೂ ಉಪಯೋಗಿಸುವುದು.

ಸಮಾಧಿ - ತನಗೆ ಕೊಟ್ಟಿರುವ ಅಥವಾ ತಾನು ತೆಗೆದುಕೊಂಡಿರುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದು.

ಯೋಗೇನ ಚಿತ್ತಸ್ಯ ಪದೇನ ವಾಚ
ಮಲಂ ಶರೀರಸ್ಯಚ ವೈದ್ಯಕೇನ
ಯೋಪ ಕರೋತಮ್ ಪ್ರವರಮ್ ಮನೀನಾಮ್
ಪತಂಜಲಿ ಪ್ರಾಂಜಲಿರಾನತೊಸ್ಮಿ
ಆಬಾಹು ಪುರುಷಾಕಾರಂ
ಶಂಖ ಚಕ್ರಸಿಧಾರಣಂ
ಸಹಸ್ರ ಶಿರಸಂ ಶ್ವೇತಂ
ಪ್ರಣಮಾಮಿ ಪತಂಜಲಿಂ

ಚಿತ್ತ ಎಂದರೆ ಮನಸ್ಸು,ಮನಸ್ಸು ಎಂದರೆ ಬರಿ ಮೆದುಳಲ್ಲ. ಇಲ್ಲಿನ ಗೀತೆ, ಪತಂಜಲಿ ಮುನಿಗಳು ಅಷ್ಟಾಂಗ ಯೋಗ, ಆಸನ ಮತ್ತು ಪ್ರಾಣಾಯಾಮ ಒಂದುಕ್ಕೊಂದು ಕೊಂಡಿ ಇದೆ.

**ಮೊದಲನೇ ಆಯಾಮ ನೆನಪಿನ ಶಕ್ತಿ**

ಪಂಚ ಇಂದ್ರಿಯಗಳ ಮೂಲಕ ತೆಗೆದುಕೊಂಡ ಪ್ರತಿಯೊಂದನ್ನು ನೆನಪಿನಲ್ಲಿ ಇರಿಸಿಕೊಳ್ಳುವುದು. ಅದನ್ನು ಅವಶ್ಯಕತೆ ಇದ್ದಾಗ ಒಳಕ್ಕೆ ತೆಗೆದುಕೊಳ್ಳುವುದು ಮತ್ತು ಹೊರಕ್ಕೆ ತೆಗೆಯುವುದು.

**ಎರಡನೇ ಆಯಾಮ ವಿಚಾರ ವ್ಯವಹಾರ ಶಕ್ತಿ**

ಇದನ್ನು ಅವಶ್ಯಕತೆ ಬಿದ್ದಾಗ ನಮ್ಮೊಳಗೆ ಚರ್ಚಿಸಿ ಯಾವುದು ಸೂಕ್ತ ಮತ್ತು ಯಾವುದು ಸೂಕ್ತವಲ್ಲ ವಿಚಾರ ಮಾಡುವುದುಹಾಗೂನಡೆದುಕೊಳ್ಳುವುದು.

**ಮೂರನೇ ಆಯಾಮ ನಿರ್ಧಾರ ತೆಗೆದುಕೊಳ್ಳುವ ಶಕ್ತಿ**

ಮೇಲಿನ ಎರಡು ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಬೇಕು. ನಿರ್ಧಾರ ಶಕ್ತಿ ಮೂರನೇ ಆಯಾಮ. ಸಾಧಾರಣವಾದ ನೆನಪಿನ ಶಕ್ತಿ ಪ್ರತಿಯೊಂದು ಜೀವಿಗೂ ಇರುತ್ತದೆ. ಯೋಗಾಸನ ಪ್ರಾಣಾಯಾಮ ಮಾಡುವವರಿಗೆ ಸಾಧಾರಣ ಶಕ್ತಿಗಿಂತ ಹಲವಾರು ಪಟ್ಟು ಜಾಸ್ತಿ ಇರುತ್ತದೆ. ಸಾಧಾರಣವಾದ ವಿಚಾರವಂತಿಕೆ, ಬುದ್ಧಿವಂತಿಕೆ, ಎಲ್ಲರಿಗೂ ಇರುತ್ತದೆ. ಆದರೆ ಯೋಗ ಪ್ರಾಣಾಯಾಮ ಮಾಡುವವರಿಗೆ ಇದು ಹೆಚ್ಚಿರುತ್ತದೆ. ಯೋಗ ಮಾಡುವವರಿಗೆ ನಿರ್ಧಾರ ಶಕ್ತಿ ಸಾಧಾರಣ ಜನರಿಗಿಂತ ತುಂಬಾಜಾಸ್ತಿ ಇರುತ್ತದೆ ಹಾಗೂ ಶಕ್ತಿಯನ್ನು ಸರಿಯಾದ ಮತ್ತು ಸೂಕ್ತ ಸಮಯದಲ್ಲಿ ಬಳಸುವ ನಿರ್ಧಾರ ಜಾಸ್ತಿ ಇರುತ್ತದೆ.

**ಪದೇನ ವಾಚ**

ಸಾಧಾರಣವಾದ ವ್ಯಕ್ತಿಗಳಿಗೆ ಪದ ಬಳಕೆ ಹಾಗೂ ವಾಕ್ಯ ಬಳಕೆ ಎರಡು ಸ್ವಲ್ಪ ಗೊತ್ತಿರುತ್ತದೆ. ಆದರೆ ಯೋಗ ಮಾಡುವವರಿಗೆ ಸೂಕ್ತವಾದ ಪದಗಳ ಬಳಕೆ ಸೂಕ್ತವಾದ ವಾಕ್ಯಗಳ ಬಳಕೆ, ಸರಿಯಾದ ಪದಗಳನ್ನು ಆಳದಿಂದ ಹೆಕ್ಕಿ, ಅದಕ್ಕೆ ಒಂದು ಲಾಲಿತ್ಯ ಮತ್ತು ಸ್ಪಷ್ಟತೆ ಕೊಟ್ಟು, ಆ ಪದಕ್ಕೆ ಶಕ್ತಿ ಮತ್ತು ಧ್ವನಿಯನ್ನು ಜೋಡಿಸಿತಾವು ಬಳಸುವ ವಾಕ್ಯದ

ಮುಖಾಂತರ ಸಂವಾಹನ ಶಕ್ತಿಯನ್ನು ಜಾಸ್ತಿ ಮಾಡಿಕೊಳ್ಳುತ್ತಾರೆ.

**ಮಲಂ ಶರೀರಸ್ಯಚ ವೈದ್ಯಕೇನ**

ಯೋಗಿಗಳು ತನ್ನ ದೇಹದ ಅನಾವಶ್ಯಕವಾದ ಘನ, ದ್ರವ ಮತ್ತು ಅನಿಲ, ಮಲವನ್ನು,ದೇಹ ಮತ್ತು ಮನಸ್ಸಿನ ಮಲಿನವನ್ನು ಆಸನ ಹಾಗೂ ಪ್ರಾಣಾಯಾಮದ ಮುಖಾಂತರ ತೆಗೆಯುತ್ತಾರೆ.

**ಆಬಾಹು ಪುರುಷಾಕಾರಂ**

ದೇಹಕ್ಕೆ ಒಂದು ರಚನೆ ಮತ್ತು ಪ್ರಮಾಣ ಇರುತ್ತದೆ. ಆದರೆ ನಮ್ಮ ಆಹಾರ ವಿಚಾರ ನಡವಳಿಕೆಗಳಿಂದ ನಮ್ಮ ದೈನಂದಿನ ಕ್ರಿಯೆಗಳಿಂದ (ನಿಂತು ಕುಳಿತು ಮಲಗಿರುವ ಬಂಗಿಗಳಿಂದ) ದೇಹಪ್ರಮಾಣದ ಆಯತಪ್ಪಿ. ವಕ್ರವಾಗುತ್ತಾ ಹೋಗುತ್ತದೆ. ಯೋಗಿಗಳು ಯೋಗ ಮಾಡುವುದರಿಂದ ಮತ್ತೆ ಈ ದೇಹವು ಮೂಲರೂಪದ ರಚನೆಗೆ ವಾಪಸ್ಸು ತರುತ್ತಾರೆ.

**ಶಂಕ ಚಕ್ರ ಸಿಧಾರಣಂ**

ಶಂಕು ಎಂದರೆ ಸಮಾಧಾನ ಮತ್ತು ಚಕ್ರ ಎಂದರೆ ಶಕ್ತಿ/ವೇಗ. ದೇಹ ಮತ್ತು ಮನಸ್ಸಿಗೆ ಎರಡೂ ಶಕ್ತಿ ಅವಶ್ಯಕತೆ ಇದೆ. ಹೇಗೆ ಬೆಳಸಬೇಕು ಮತ್ತು ಯಾವಾಗ ಸಮಾಧಾನವಾಗಿರಬೇಕು, ಯಾವಾಗ ವೇಗವಾಗಿರ ಬೇಕು, ಎಂಬುದು ಯೋಗ ಮಾಡುವವರಿಗೆ ಗೊತ್ತಿರುತ್ತದೆ. ಒಂದು ವಾಹನ ಚಲಿಸಿದ ಹಾಗೆ ಯಾವಾಗ ಆಕ್ಸಿಲರೇಟರ್ ಕೊಡಬೇಕು ಆಗಾಗ ಬ್ರೇಕ್ ಹಿಡಿಯಬೇಕು ಗೊತ್ತಿರುತ್ತದೆ.

**ಸಹಸ್ರ ಶಿರಸಂ**

ಸಹಸ್ರ ಶಿರಸಂ ಎಂದರೆ ಸಾವಿರ ತಲೆಯುಳ್ಳವರು, ಸಾಧಾರಣವಾದ ವ್ಯಕ್ತಿಗಳಿಗೆ ಅನುಭವಗಳ ಆಧಾರದ ಮೇಲೆ ಬುದ್ಧಿವಂತಿಕೆ ಇರುತ್ತದೆ. ಆದರೆ ಯೋಗಿಗಳು ಈ ಶಕ್ತಿಯನ್ನು ಅದ್ವಿತೀಯವಾಗಿ ಹಲವಾರು ಪಟ್ಟು ಸಾವಿರಾರು ಯೋಚನೆ ಯೋಜನೆಗಳನ್ನು ಸೃಷ್ಟೀಕರಿಸಿ ಬಳಸುತ್ತಾರೆ.

**ಶ್ವೇತಂ**

ಶ್ವೇತಂ – ಶ್ವೇತಾ ಅಂದರೆ ಬಿಳಿ, ಅಂದರೆ ಶುಭ್ರ, ಅಂದರೆ ಸ್ಪಷ್ಟ, ಸಾಧಾರಣವಾದ ವ್ಯಕ್ತಿಗಳಿಗೆ ನೋಡಿರುವ, ಕೇಳಿರುವ, ರುಚಿಸಿರುವ, ವಾಸನೆ ನೋಡಿರುವ ಹಾಗೂ ಮುಟ್ಟಿರುವ ಅನುಭವಗಳಲ್ಲಿ ಸ್ಪಷ್ಟತೆ ಕಡಿಮೆ. ಯೋಗಿಗಳಿಗೆ ಇಂದ್ರಿಯಗಳ ವಾಸನ ಶಕ್ತಿಗಳು ಹಲವಾರು ಪಟ್ಟು ಹೆಚ್ಚು ಸ್ಪಷ್ಟವಾಗಿರುತ್ತದೆ.


ಹೀಗೆ ಎಲ್ಲಾ ಶಕ್ತಿಯನ್ನು ಇಟ್ಟುಕೊಂಡಿದ್ದಂತಹ ಓಡಿಸಿಕೊಂಡಿದಂತಹ ಅನುಭವಿಸಿ ಕೊಂಡಿದ್ದು ಅಂತಹಪತಂಜಲಿ ಯವರಿಗೆ ನಮಿಸುತ್ತಾ, ಹೀಗೆ ವಿಚಾರ ಸ್ಪಷ್ಟತೆ ಗಳನ್ನು ಬರಿಯ ಪುಸ್ತಕ ಪದಗಳಲ್ಲಿ ಇರಿಸದೆ, ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುವ ಪ್ರತಿಯೊಬ್ಬರೂ ಆಧ್ಯಾತ್ಮಿಕತೆ ಉಳ್ಳವರೇ.

ಅವರನ್ನು ಯೋಗಿಗಳು ಎಂದು ಕರೆಯುತ್ತೇವೆ. ಹಾಗೆ ಯೋಗಿಗಳು ಮನುಷ್ಯತ್ವವನ್ನು ಯಾವಾಗಲೂ ಪಾಲಿಸುತ್ತಾರೆ. ಭಯಪಡುವುದು ಭಯ ಪಡಿಸುವುದು ಎರಡು ಇರುವುದಿಲ್ಲ. ಸಮಾಜದ ದುಃಸ್ವಪ್ನವಾದ ಜಾತಿಯತೆ ಮತೀಯತೆ, ಭಾಷೆಯ ಭಾವನೆಗಳ ಮೇಲೆ ಮೇಲು-ಕೀಳು, ಅರಿಷಡ್ವರ್ಗಗಳನ್ನು ಗೆಲ್ಲುತ್ತಾರೆ. ಸಮಾಜದ ಎಲ್ಲರೂ ಗೌರವಕ್ಕೆ ಪಾತ್ರರು ಎನ್ನುವ ಮನಸ್ಥಿತಿಯನ್ನು ಹೊಂದಿರುತ್ತಾರೆ. ಅಂತಹ ಪರಿಸ್ಥಿತಿ ನಿರ್ಮಾಣ ಮಾಡುತ್ತಾರೆ. ಸುಳ್ಳು ಕಪಟಗಳಿಂದ ದೂರ ಇರುತ್ತಾರೆ. ತಾನು ಬದುಕಿ ನಾಲ್ಕಾರು ಜನರನ್ನು ಬದುಕಿಸುವ ಶಕ್ತಿಯನ್ನು ಹೊಂದಿರುತ್ತಾರೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು  
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ  
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ  
ಎಲ್ಲರೊಳಗೊಂದಾಗು-ಮಂಕುತಿಮ್ಮ

ಡಿವಿಜಿಯವರ ಈ ಪದ್ಯದಂತೆ ಬದುಕುತ್ತಾರೆ. ತಾನು ಚೆನ್ನಾಗಿದ್ದು, ಇತರ ನೋವುಗಳಿಗೆ ಕುಗ್ಗದೆ, ಸಂತೋಷಕ್ಕೆ ಹಿಗ್ಗದೆ, ಸಮವಾಗಿ ಬದುಕುತ್ತಾರೆ. ಸತ್ಯ ಧರ್ಮದ ಹಾದಿಯಲ್ಲಿ ಯಾವಾಗಲೂ ಇರುತ್ತಾರೆ. ಇದೇ ಧರ್ಮ, ಇದೆ ಆಧ್ಯಾತ್ಮ, ಇದೇ ಯೋಗ.

ಸಕಲ ಮಾನವಕುಲಕ್ಕೆ ಸದಾ ಶುಭವನ್ನು ಕೋರುವ  
ಯೋಗಾತ್ಮ ಶ್ರೀಹರಿ



– ಯೋಗಾತ್ಮ ಶ್ರೀಹರಿ  
ಮೈಸೂರು.

# ಗಂಗೆಯ ಸುತನ ವೈಕುಂಠ ಯಾತ್ರೆ




ದಿನಾಂಕ 08/09/2020 ರ ಮಂಗಳವಾರ ದಂದು ಬಹುಶಃ ಮಂಡ್ಯ ಜಿಲ್ಲೆಯ ಜನತೆಯ ಪಾಲಿಗೆ ಅಮಂಗಳವಾಗಿತ್ತು. ಅಂದು ಮಧ್ಯಾಹ್ನ ಸುಮಾರು 2 ಗಂಟೆಯ ವೇಳೆಗೆ ಜಿಲ್ಲೆಯ ಶೈಕ್ಷಣಿಕ ಪ್ರಗತಿಯ ಹರಿಕಾರ, ನಾಸ್ತಿಕರಿಗೆ ಜ್ಞಾನ, ಧ್ಯಾನದ ದಾಸೋಹ ಉಣಿಸಿದ ಸ್ವಾಮೀಜಿ, ಪುಟಾಣಿ ಮಕ್ಕಳ ಪಾಲಿನ ದಾದಾಜಿ. ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಹಾಗೂ ಶ್ರೀ ವೆಂಕಟೇಶ್ವರ ಚಾರಿಟೆಬಲ್ ಟ್ರಸ್ಟ್ ಸಂಸ್ಥಾಪಕರೂ ಆದ ಪರಮ ಪೂಜ್ಯ ಶ್ರಿ ಶ್ರೀ ಅನಂತ ಕುಮಾರ ಸ್ವಾಮೀಜಿರವರ ನಿಧನ ಸುದ್ದಿ ಬರಸಿಡಿಲಿನಂತೆ ಬಂದಪ್ಪಳಿಸಿತು. ತೀವ್ರ ಅನಾರೋಗ್ಯದ ಕಾರಣ ಸ್ವಾಮೀಜಿ ಇಹಲೋಕ ತ್ಯಜಿಸಿದರು. ಅವರ ಪಾರ್ಥಿವ ಶರೀರದ ಅಂತಿಮ ದರ್ಶನದ ವ್ಯವಸ್ಥೆಯನ್ನು ಅಭಿನವ ಭಾರತಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಮಾಡಲಾಯಿತು.

ಸ್ವಾಮೀಜಿಯವರು ಅಪ್ಪಟ ಬ್ರಹ್ಮಚಾರಿಯಾಗಿ ಸನ್ಯಾಸ ಜೀವನ ನಡೆಸಿದವರು. ತಮ್ಮ ಇಡೀ ಜೀವನವನ್ನು ಮಂಡ್ಯ ಜಿಲ್ಲೆಯ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಮುಡುಪಿಟ್ಟರು. ಹಾಗಾಗಿ ಅವರ ಪಾರ್ಥಿವ ಶರೀರದ ಸಂಸ್ಕಾರದ ಅಂತಿಮ ವಿಧಿ ವಿಧಾನಗಳನ್ನು ಸ್ವಾಮೀಜಿಯವರ ಇಚ್ಛೆಯಂತೆ ಅವರೇ ಸ್ವತಃ ತಮ್ಮ ಮಾನಸ ಪುತ್ರ ಎಂದು ಘೋಷಿಸಿಕೊಂಡಿದ್ದ ಅವರ ಪ್ರೀತಿಯ ಶಿಷ್ಯ ಅಭಿನವ ಭಾರತಿ ವಿದ್ಯಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಶಿವಮೂರ್ತಿ ಕೀಲಾರರವರು ವೇದಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮಾರವರ ಮಾರ್ಗದರ್ಶನದಲ್ಲಿ ಸಕಲ ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಶ್ರೀ ಶಿವಮೂರ್ತಿ ಕೀಲಾರರವರನ್ನು ಸ್ವಾಮೀಜಿಯವರು ಬಹಳ ಚಿಕ್ಕ ವಯಸ್ಸಿನಿಂದಲೇ ಅಂದರೆ ತಮ್ಮ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿದಲೇ ತಮ್ಮ ಪ್ರೀತಿಯ ಶಿಷ್ಯನನ್ನಾಗಿ ಗುರುತಿಸಿಕೊಂಡಿದ್ದರು. ಶ್ರೀ ಶಿವಮೂರ್ತಿರವರಿಗೆ ಪಿತೃವಿಯೋಗದ ನಂತರದ ದಿನಗಳಲ್ಲಿ ಅವರಿಗೆ ತಂದೆಯಾಗಿ ಅವರ ಜೀವನವನ್ನು ರೂಪಿಸಿಕೊಳ್ಳಲು ನೆರವಾದರು, ಸ್ವಾಮೀಜಿಯವರು ತಮ್ಮ ಇಚ್ಛೆಯಂತೆಯೇ ತಾವು ಸ್ಥಾಪಿಸಿದ ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಹಾಗೂ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ಜವಬ್ದಾರಿಯನ್ನು ನೀಡಿದರು.

ಗಂಗೆಯ ನಾಡು ಕಾಶಿಯಿಂದ ಕಾವೇರಿಯ ನಾಡು ಮಂಡ್ಯಕ್ಕೆ ಬಂದು ಇಲ್ಲಿ ತಮ್ಮ ಸಾರ್ಥಕ ಜೀವನ ಯಾತ್ರೆಯನ್ನು ಮುಗಿಸಿ ಇಲ್ಲಿಯೇ ದೇಹ ತ್ಯಾಗ ಮಾಡಿದ ಸ್ವಾಮೀಜಿರವರ ಪಾರ್ಥಿವ ಶರೀರದ ಚಿತಾಭಸ್ಮವನ್ನು ಶ್ರೀ ಶಿವಮೂರ್ತಿ ಕೀಲಾರರವರು ಪವಿತ್ರ ನದಿಗಳಾದ ಗಂಗಾ – ಕಾವೇರಿ ನದಿಗಳಲ್ಲಿ ವಿಸರ್ಜನೆ ಮಾಡಿದರು. ಒಬ್ಬ ಪುತ್ರನಾಗಿ ತಂದೆಯ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿ ಕೃತಾರ್ಥರಾದರು.

ಸ್ವಾಮೀಜಿಯವರ ಅಂತ್ಯ ಸಂಸ್ಕಾರವಾದ ಅಭಿನವ ಭಾರತಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಸ್ವಾಮೀಜಿಯವರ ಪುತ್ಥಳಿಯನ್ನೊಳಗೊಂಡ ಸ್ಮಾರಕ ನಿರ್ಮಾಣವನ್ನು ಮಾಡಲಾಗುತ್ತಿದೆ. ಒಂದು ಸುಂದರ ದೇವಾಲಯದ ರೂಪದಲ್ಲಿ ಸ್ಮಾರಕ ನಿರ್ಮಾಣಗೊಳ್ಳುತ್ತಿದೆ. ಸ್ವಾಮೀಜಿಯವರು ಬಹಳ ಪ್ರೀತಿಯಿಂದ ಸ್ಥಾಪಿಸಿ ಪೋಷಿಸಿದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ಚಟುವಟಿಕೆಗಳ ಕೇಂದ್ರ ಸ್ಥಾನವಾಗಿ ಕಾರ್ಯನಿರ್ವಹಿಸಲಿದೆ, ಇನ್ನು ಕೆಲವೇ ದಿನಗಳಲ್ಲಿ ಸ್ಮಾರಕ ಲೋಕಾರ್ಪಣೆಗೊಳ್ಳಲಿದೆ.



# ಗಂಗೆಯ ಪುತ್ರನ ಅಂತಿಮ ಯಾತ್ರೆ......






ದಿನಾಂಕ 08/09/2020 ರ ಮಂಗಳವಾರ ಸ್ವಾಮೀಜಿ ಇಹಲೋಕ ತ್ಯಜಿಸಿದರು. ಅವರ ಪಾರ್ಥಿವ ಶರೀರದ ಅಂತಿಮ ದರ್ಶನದ ವ್ಯವಸ್ಥೆಯನ್ನು ಅಭಿನವ ಭಾರತಿ ಕಾಲೇಜಿನ ಆವರಣದಲ್ಲಿ ಮಾಡಲಾಯಿತು.




ಸ್ವಾಮಿಜಿಯರವರ ಚಿತಾಭಸ್ಮ ವಿಸರ್ಜನೆ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯ ಕಾವೇರಿ ನದಿಯಲ್ಲಿ



ಸ್ವಾಮಿಜಿಯರವರ ಭಾವಪೂರ್ಣ ಶ್ರದ್ಧಾಂಜಲಿ ಸಮಾರಂಭ





ಸ್ವಾಮೀಜಿಯವರ ಹುಟ್ಟೂರು ವಾರಣಾಸಿ(ಕಾಶಿ)ಯ ಗಂಗಾನದಿಯಲ್ಲೂ ಚಿತಾ ಭಸ್ಮ ವಿಸರ್ಜನೆಯನ್ನು ಮಾಡುವ ಮೂಲಕ ಶ್ರೀ ಶಿವಮೂರ್ತಿ ಕೀಲಾರರವರು ಒಬ್ಬ ಪುತ್ರನಾಗಿ ತಮ್ಮ ತಂದೆಯ ಅಂತಿಮ ಸಂಸ್ಕಾರದ ಜವಬ್ದಾರಿಯನ್ನು ನಿಭಾಹಿಸಿ ಕೃತಾರ್ಥರಾದರು.



ಸ್ವಾಮೀಜಿಯವರ ಹುಟ್ಟೂರು ವಾರಣಾಸಿ(ಕಾಶಿ)ಯಲ್ಲಿ ಸ್ವಾಮೀಜಿಯವರ ಸಂಬಂಧಿಗಳೊಂದಿಗೆ ಶ್ರೀ ಶಿವಮೂರ್ತಿ ಕೀಲಾರರವರು



ಸ್ವಾಮೀಜಿಯವರ ಸ್ಮಾರಕ ಭವನ ನಿರ್ಮಾಣ ಹಂತದಲ್ಲಿ...